ಸಂಪುಟ : 8 ಸಂಚಿಕೆ : 267 ಪುಟ : 4 ಬೆಲೆ : 3.00 ಶನಿವಾರ ಡಿಸೆಂಬರ್ 2, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 267 Pages : 4 Price : 3.00 Saturday December 2, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಡಿಸೆಂಬರ್ 2 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 4ರಲ್ಲಿ ಕಣವಿ ಪ್ಲಾಟ್, ಬಿ.ಎಸ್.ಎನ್.ಎಲ್. ಆಫೀಸ್, ಮಂಜುನಾಥ ನಗರ, ಗೌರಿ ಗುಡಿ, ಬಾಳಿಕಾಯಿವರ ಲೈನ್, ಟರ್ನಲ್ ಪೇಟೆ, ಪೂರ್ತಿ ಭಾಗ, ಪೋಸ್ಟ್ ಆಫೀಸ್ ಲೈನ್, ಮಾಜಿ ಮೆಂಬರ್ ಲೈನ್, ಗಾರ್ಡನ್ ಲೈನ್, ಸುಣ್ಣದ ಭಟ್ಟಿ ಲೈನ್, ಪೂರ್ತಿ ಭಾಗಗಳು, ಪಾಂಡವರ ಮನೆಯ ಲೈನ್, 200 ಮನೆಯ ಲೈನ್, 225 ಮನೆ ಲೈನ್, ವಾರ್ಡ್ ನಂ. 27ರ ಪಂಚಾಕ್ಷರಿನಗರ 3ನೇ ಕ್ರಾಸ್, 4ನೇ ಕ್ರಾಸ್, ಈಶ್ವರ ಗುಡಿ ಲೈನ್, ವಾರ್ಡ್ ನಂ. 16ರಲ್ಲಿ ಹೊಂಬಳ ನಾಕಾ ಲೈನ್, ಜನತಾ ಕಾಲೋನಿಯ ಭಾಗಗಳು

ಕುಡಿಯುವ ನೀರಿನ ನಳ ಹೊಂದಿರುವ ನಾಗರಿಕರು ತಮ್ಮ ನೀರಿನ ಕರ ತುಂಬಿ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೃಷಿ ಇಲಾಖೆಯಿಂದ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ರೋಣ

ರೋಣ ಮತ್ತು ಗಜೇಂದ್ರಗಡ ತಾಲೂಕಿನ ರೈತರಿಗೆ 2023-24ನೇ ಸಾಲಿನ ಸೂಕ್ಷ್ಮ ನೀರಾವರಿ ಯೋಜನೆಯಡಿಯಲ್ಲಿ ಕೃಷಿ ಇಲಾಖೆಯಿಂದ ತುಂತುರು ನೀರಾವರಿ ಹಾಗೂ ಹನಿ ನೀರಾವರಿ ಘಟಕಗಳನ್ನು ಅಳವಡಿಸಿಕೊಳ್ಳಲು ಶೇ.90ರಷ್ಟು ಸಹಾಯಧನದಡಿಯಲ್ಲಿ ಪ್ರತಿ ಹೆಕ್ಟೇರ್‌ಗೆ ರೈತರ ವಂತಿಕೆ 63 ಎಂಎಂಗೆ ರೂ. 4139 ಮತ್ತು 75 ಎಂಎಂಗೆ ರೂ. 4667ರಂತೆ ನೀರಾವರಿ ಘಟಕಗಳ ವಿತರಣೆಗೆ ಅರ್ಜಿ ಆಹ್ವಾನಿಸಿದೆ.

ಆಸಕ್ತ ರೈತರು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಿ, ಅಗತ್ಯ ಮಾಹಿತಿ ಪಡೆದುಕೊಳ್ಳಬೇಕು ಎಂದು ತಾಲೂಕಾ ಸಹಾಯಕ ಕೃಷಿ ನಿರ್ದೇಶಕ ರವೀಂದ್ರ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ವಾಗತ ಸಮಾರಂಭ ಇಂದು

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಆರ್.ಎನ್. ದೇಶಪಾಂಡೆ ಸರಕಾರಿ ಪ್ರಥಮದರ್ಜೆ ಕಾಲೇಜಿನ ಬಿ.ಎ, ಬಿ.ಕಾಂ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಹಾಗೂ 2023-24ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಹಾಗೂ ಎನ್‌ಎಸ್‌ಎಸ್, ರೆಡ್ ಕ್ರಾಸ್, ಮತ್ತು ರೋವರ್ಸ್ &ರೇಂಜರ್ಸ್ ಘಟಕಗಳ ಉದ್ಘಾಟನೆಯನ್ನು ಶನಿವಾರ ಬೆಳಿಗ್ಗೆ 10.30ಕ್ಕೆ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಉದ್ಘಾಟಕರಾಗಿ ಗದಗ ಸರಕಾರಿ ಪ್ರಥಮದರ್ಜೆ ಕಾಲೇಜು ಪ್ರಾಚಾರ್ಯ ಡಾ. ಎಸ್.ಎಫ್. ಸಿದ್ನೆಕೊಪ್ಪ, ಅಧ್ಯಕ್ಷತೆಯನ್ನು ಕಾಲೇಜು ಪ್ರಾಚಾರ್ಯ ಡಾ. ಆರ್.ಎಂ. ಕಲ್ಲನಗೌಡರ, ಗೀತಾಂಜಲಿ.ಆರ್, ವಿನಾಯಕ ಶಿರಬಡಿಗಿ, ಪ್ರಸನ್.ಎಸ್, ಅನುಪಮಾ ಹಾಗೂ ಕಾಲೇಜು ಆಡಳಿತ ಮಂಡಳಿ, ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

## ಶಾಲೆಗೆ ಸತತ ಗೈರು: ಸಹ ಶಿಕ್ಷಕನಿಗೆ ಶಿಸ್ತು ಕ್ರಮದ ಎಚ್ಚರಿಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಬೆಟಗೇರಿಯ ನೇಕಾರ ನಗರದ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಗಂಡು ಮಕ್ಕಳ ಶಾಲೆ ನಂ. 9 ರಲ್ಲಿ ಸಹ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಮಂಜುನಾಥ್ ಎನ್. ಮಳಗಾವಿ ಇವರು 7-3-2023 ರಿಂದ ಇಂದಿನವರೆಗೂ ಶಾಲಾ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತಾರೆ. ಕಚೇರಿಯಿಂದ ಕಾರಣ ಕೇಳುವ ನೋಟಿಸ್‌ಗಳನ್ನು ನೋಂದಾಯಿತ ಅಂಚೆ ಮೂಲಕ ಜಾರಿ ಮಾಡಲಾದರೂ ಸಹ ಅವುಗಳು ಸ್ವೀಕೃತವಾಗದೆ ಕಚೇರಿಗೆ ಹಿಂದಿರುಗಿವೆ. ವಿಳಾಸ ಬದಲಾವಣೆ ಕುರಿತು ಮಾಹಿತಿಯನ್ನು ಸಹ ಪ್ರಧಾನ ಗುರುಗಳಿಗೆ ನೀಡಿರುವುದಿಲ್ಲ. ಕರ್ತವ್ಯ ನಿರ್ವಹಣೆಯಲ್ಲಿ ಲೋಪ ಎಸಗಲಾಗಿದೆ. ಈ ನಿಟ್ಟಿನಲ್ಲಿ ಈ ಪತ್ರಿಕಾ ಪ್ರಕಟಣೆ ಪ್ರಕಟವಾದ ದಿನಾಂಕದಿಂದ ಹದಿನೈದು ದಿನದೊಳಗೆ ಕೂಡಲೆ ಶಾಲಾ ಕರ್ತವ್ಯಕ್ಕೆ ಹಾಜರಾಗಬೇಕು. ಇಲ್ಲವಾದಲ್ಲಿ ಸಮಜಾಯಿಷಿ ಏನೂ ಇಲ್ಲವೆಂದು ತಿಳಿದು ಏಕಪಕ್ಷೀಯವಾಗಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 'ವಿಶ್ವ ಏಡ್ಸ್ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿದ ವಿ.ಪ ಸದಸ್ಯ ಎಸ್.ವಿ.ಸಂಕನೂರ

# ಏಡ್ಸ್ ತಡೆಗಟ್ಟಲು ಸಮುದಾಯದ ಸಹಭಾಗಿತ್ವ ಅವಶ್ಯಕ

■ ವಿಜಯಸಾಕ್ಷಿ ಸುದ್ದಿ, ಗದಗ

ಏಡ್ಸ್ ತಡೆಗಟ್ಟಲು ಸಮುದಾಯದ ಸಹಭಾಗಿತ್ವ ಅವಶ್ಯಕವಾಗಿದೆ. ಈ ವರ್ಷದ ಘೋಷಣೆಯಾದ 'ಸಮುದಾಯಗಳು ಮುನ್ನಡೆಸಲಿ' ಎಂಬ ನುಡಿಯಂತೆ ಸಮುದಾಯ ಜಾಗೃತವಾಗಿ, ಮುಂದಾಳತ್ವ ವಹಿಸಿ ಜಾಗೃತಿಯನ್ನು ಮೂಡಿಸಿ, ಏಡ್ಸ್ ರೋಗ ಹರಡುತ್ತಿರುವ ಪ್ರಮಾಣವನ್ನು ಸೊನ್ನೆಗೆ ತಂದಾಗ ಮಾತ್ರ ಈ ದಿನಾಚರಣೆಯ ಉದ್ದೇಶ ಪೂರ್ಣಗೊಳ್ಳುವುದು ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ತಿಳಿಸಿದರು.



ನಗರದ ಜೆ.ಟಿ. ಕಾಲೇಜಿನ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ, ಜಿಲ್ಲಾ ವಾರ್ತಾ ಇಲಾಖೆ, ಜಿಮ್ಸ್ ರಕ್ತ ನಿಧಿ ಕೇಂದ್ರ, ಜಿಲ್ಲಾ ಆಸ್ಪತ್ರೆ, ಜಿಮ್ಸ್ ಸರಕಾರಿ ಶುಶ್ರೂಷಾ ಮಹಾವಿದ್ಯಾಲಯ, ಬಸವೇಶ್ವರ ಪ್ಯಾರಾ ಮೆಡಿಕಲ್ ಕಾಲೇಜು, ಗಾಂಧೀಜಿ ಪ್ಯಾರಾ ಮೆಡಿಕಲ್ ಕಾಲೇಜು, ಪಾಲನ ಗಾಲಾ ನರ್ಸಿಂಗ್ ಕಾಲೇಜು, ಜಿಲ್ಲಾ ರೆಡ್‌ಕ್ರಾಸ್ ಸಂಸ್ಥೆ, ಆಯ್.ಎಂ. ಎರಕ್ತ ಭಂಡಾರ, ಕೆ.ವಿ. ಹಂಚಿನಾಳ ನರ್ಸಿಂಗ್ ಕಾಲೇಜು, ರಕ್ಷಣೆ ಜಿಲ್ಲಾ ಮಹಿಳಾ ಒಕ್ಕೂಟ, ಸೃಷ್ಠಿ ಸಂಕುಲ ಸಂಸ್ಥೆ, ನವಚೇತನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಮಹಾವಿದ್ಯಾಲಯ ಹಾಗೂ ರೆಡ್ ರಿಬ್ಬನ್ ಕ್ಲಬ್ ಗದಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ಜರುಗಿದ 'ವಿಶ್ವ ಏಡ್ಸ್ ದಿನಾಚರಣೆ' ಕಾರ್ಯಕ್ರಮವನ್ನುದ್ಘಾಟಿಸಿ ಮಾತನಾಡಿದರು.

▶▶3 ನೇ ಪುಟಕ್ಕೆ

### ಜಾಥಾ ಕಾರ್ಯಕ್ರಮ

ಕಾರ್ಯಕ್ರಮಕ್ಕೂ ಮುನ್ನ ಜಿಲ್ಲಾಡಳಿತ ಭವನದ ಆವರಣದಲ್ಲಿ ಜನಜಾಗೃತಿ ಜಾಥಾಕ್ಕೆ ಜಿಮ್ಸ್ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್. ನೀಲಗುಂದ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ನೀಡಿದರು. ಜಾಥಾವು ಜಿಲ್ಲಾಡಳಿತ ಭವನದಿಂದ ಟಿಪ್ಪು ವೃತ್ತ, ಮುಳಗುಂದ ನಾಕಾ, ಚೆನ್ನಮ್ಮ ವೃತ್ತ, ಭೀಷ್ಮ ಕೆರೆ ಮೂಲಕ ಬಸವೇಶ್ವರ ಪುತ್ಥಳಿ ಸ್ಥಳಕ್ಕೆ ಬಂದು ತಲುಪಿತು. ಈ ಸಂದರ್ಭದಲ್ಲಿ ಡ್ಯಾಪ್ಕ್ಯೂ ಅಧಿಕಾರಿ ಡಾ. ಅರುಂಧತಿ ಕೆ., ತಾಲೂಕಾ ಆರೋಗ್ಯಾಧಿಕಾರಿ ಡಾ. ಪ್ರೀತ್ ಖೋನಾ, ಡ. ಮಹ್ಮದ್ ಅಶ್ರಫ್‌ಉಲ್, ಉಮೇಶ ಕರಮುಡಿ, ಪುಷ್ಪಾ ಪಾಟೀಲ, ಗೀತಾ ಕಾಂಬಳೆ, ಜಿಮ್ಸ್ ನರ್ಸಿಂಗ್ ಕಾಲೇಜಿನ ಉಪನ್ಯಾಸಕರಾದ ಸ್ಟೀಫನ್ ಜಾನ್, ಶಿವರಾಜ ಕುಂಬಾರ, ಪದ್ಮರಾಜ ವಾಲೀಕಾರ, ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ಎನ್‌ಜಿಓ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಜಿಲ್ಲೆಯ ಹೆಚ್.ಐ.ವಿ. ನಿಯಂತ್ರಣದಲ್ಲಿ ಉತ್ತಮ ಸೇವೆ ಸಲ್ಲಿಸಿದ ಲಕ್ಷ್ಮೇಶ್ವರ, ನರಗುಂದ, ಮುಂಡರಗಿ ಮತ್ತು ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಗದಗ ಐಸಿಟಿಸಿ ಆಪ್ತ ಸಮಾಲೋಚಕರಾದ ನೀಲಮ್ಮ ಸುರಪ್ಪಗೌಡರ, ಚನ್ನಮ್ಮ, ಪ್ರಯೋಗ ಶಾಲಾ ತಂತ್ರಜ್ಞರಾದ ಅರವಿಂದ ಕೊಪ್ಪಳ, ಮಂಜುನಾಥ ಅಂಗಡಿ, ರಕ್ಷಣೆ ಮಹಿಳಾ ಒಕ್ಕೂಟ, ನವಚೇತನ ನೆಟ್‌ವರ್ಕ್ ಹೀಗೆ 5 ಕೇಂದ್ರಗಳ ಸಿಬ್ಬಂದಿಗಳಿಗೆ ಉತ್ತಮ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದರೊಂದಿಗೆ ಉತ್ತಮ ರೆಡ್ ರಿಬ್ಬನ್ ಕಾಲೇಜು ಎಂದು ಸಿದ್ದೇಶ್ವರ ಕಾಲೇಜು-ನರಗುಂದ, ಜೆ.ಟಿ. ಕಾಲೇಜು-ಗದಗ ಮತ್ತು ಕೆ.ಎಲ್.ಇ ಕಲಾ ಮತ್ತು ವಾಣಿಜ್ಯ ಕಾಲೇಜಿ-ಗದಗ ಇವರುಗಳಿಗೆ ಪ್ರಮಾಣ ಪತ್ರ ನೀಡಿ ಸನ್ಮಾನಿಸಲಾಯಿತು.



### 'ಮಕ್ಕಳ ಹಕ್ಕುಗಳ ಗ್ರಾಮಸಭೆ'ಯಲ್ಲಿ ಮೂಲಭೂತ ಸೌಲಭ್ಯಗಳನ್ನೊದಗಿಸಲು ವಿದ್ಯಾರ್ಥಿಗಳ ಆಗ್ರಹ

# ವಿದ್ಯಾರ್ಥಿಗಳಿಂದ ಬೇಡಿಕೆಗಳ ಮಹಾಪೂರ

■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಇಲ್ಲಿಯ ಬಾಲಕಿಯರ ಸರಕಾರಿ ಪ್ರೌಢಶಾಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ತಾ.ಪಂ, ಜಿ.ಪಂ ಹಾಗೂ ಗ್ರಾಮ ಪಂಚಾಯಿತಿಗಳ ಸಹಯೋಗದಲ್ಲಿ ನಡೆದ 'ಮಕ್ಕಳ ಹಕ್ಕುಗಳ ಗ್ರಾಮಸಭೆ'ಯಲ್ಲಿ ಶುದ್ಧ ಕುಡಿಯುವ ನೀರು, ಶಾಲೆಗೆ ಬರುವ ಮಾರ್ಗದಲ್ಲಿ ಪುರುಷರ ಬಯಲು ಬಹಿರ್ದೆಸೆ, ಶೌಚಾಲಯ ನಿರ್ಮಾಣ ಸೇರಿದಂತೆ ಹಲವು ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ವಿದ್ಯಾರ್ಥಿಗಳು ಒತ್ತಾಯಿಸಿದರು.

ಹಲವಾರು ವರ್ಷಗಳಿಂದ ನಲ್ಲಿಯ ನೀರನ್ನೇ ಕುಡಿಯುತ್ತಿದ್ದು, ಶುದ್ಧ ಕುಡಿಯುವ ನೀರನ್ನು ಒದಗಿಸಬೇಕೆಂದು ವಿವಿಧ ಶಾಲೆಯ ಮಕ್ಕಳು ಒತ್ತಾಯಿಸಿದರು. ನಾವು ಶಾಲೆಗೆ ಬರುವ ರಸ್ತೆಯಲ್ಲಿ ಪುರಷರು ಬಯಲಿನಲ್ಲಿ ಮಲ ವಿಸರ್ಜನೆಗೆ ಕುಳಿತಿರುತ್ತಾರೆ. ಇದರಿಂದ ರಸ್ತೆಯಲ್ಲಿ ಬರುವುದಕ್ಕೆ ಅವಮಾನವಾಗುತ್ತಿದೆ. ಈ ವ್ಯವಸ್ಥೆಯನ್ನು ತಪ್ಪಿಸಿ ಉತ್ತಮ ಪರಿಸರ ನಿರ್ಮಾಣ ಮಾಡಬೇಕೆಂದು ಬಾಲಕಿಯರ ಸರಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಅಳಲು ತೋಡಿಕೊಂಡರು. ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಈಗಿರುವ ಶೌಚಾಲಯ ಸಾಕಾಗುವುದಿಲ್ಲ, ಹೆಚ್ಚಿನ ಶೌಚಾಲಯ ನಿರ್ಮಿಸಬೇಕು, ಕಂಪೌಂಡ್ ಎತ್ತರಿಸಬೇಕು, ಸಭಾ ಮಂಟಪ ನಿರ್ಮಾಣ, ಮೈದಾನಕ್ಕೆ ರಾತ್ರಿ ವೇಳೆ ಬೆಳಕಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು.

▶▶3 ನೇ ಪುಟಕ್ಕೆ



ಹೊರಗಿನವರು ಬಂದು ಕುಳಿತುಕೊಳ್ಳುವುದನ್ನು ತಪ್ಪಿಸಲು ವಾಚ್‌ಮನ್ ಒಬ್ಬರನ್ನು ನೇಮಿಸಬೇಕು. ಬಾವಿಗೆ ತಂತಿ ಬೇಲಿ ಅಳವಡಿಸಬೇಕು, ಬಾಲಕ-ಬಾಲಕಿಯರಿಗೆ ಶೌಚಾಲಯ ನಿರ್ಮಿಸಬೇಕು, ಮೈದಾನ ಸಮತಟ್ಟು ಮಾಡಬೇಕು, ಕಂಪೌಂಡ್ ನಿರ್ಮಿಸಬೇಕು ಎಂದು ಎಂ.ಕೆ.ಬಿ.ಎಸ್. ಮತ್ತು ಮಾರುತಿ ನಗರದ ಡಿ.ಪಿ.ಇ.ಪಿ. ಶಾಲೆಯ ಮಕ್ಕಳು ಆಗ್ರಹಿಸಿದರು. ಶಾಲಾ ಮೈದಾನಕ್ಕೆ ಮಣ್ಣು ತುಂಬಿಸುವುದು, ಸ್ಮಾರ್ಟ್ ಕ್ಲಾಸ್ ವ್ಯವಸ್ಥೆ, ಶಾಲಾ ಪರಿಸರ ನೈರ್ಮಲ್ಯ ಕಾಪಾಡುವುದು, ಗ್ರಂಥಾಲಯ, ಪ್ರಯೋಗಾಲಯ ಸೇರಿದಂತೆ ವಿವಿಧ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮಕ್ಕಳು ವಿನಂತಿಸಿದರು.

## ಕೆಡುಕನ್ನು ಅಳಿಸಿ ಒಳ್ಳೆಯದನ್ನು ಸ್ವೀಕರಿಸುವುದೇ ಜ್ಞಾನ

■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಬದುಕಲು ಜ್ಞಾನ, ಸಂಪತ್ತು, ಸಂತೃಪ್ತಿ ಇರಬೇಕು. ಜ್ಞಾನವಿದ್ದರೆ ಗಳಿಸಿದ್ದನ್ನು ಹೇಗೆ ಬೆಳೆಸಬೇಕು, ಉಳಿಸಬೇಕು ಎಂಬ ಅರಿವು ಬರುತ್ತದೆ. ಜ್ಞಾನವೆಂದರೆ ಸಿರಿ, ಸಂಪತ್ತು, ಅಧಿಕಾರ ಅಂತಸ್ತು ಅಲ್ಲ, ಕೆಟ್ಟದನ್ನು ತೆಗೆದು ಒಳ್ಳೆಯದನ್ನು ಸ್ವೀಕರಿಸುವುದೇ ಜ್ಞಾನವಾಗಿದೆ ಎಂದು ಕೊಪ್ಪಳ ಗವಿಮಠದ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಹೇಳಿದರು.



ಇಲ್ಲಿಯ ಬಾಲಕಿಯರ ಸರಕಾರಿ ಪ್ರೌಢಶಾಲೆಯ ಮೈದಾನದಲ್ಲಿ ಏರ್ಪಡಿಸಲಾಗಿದ್ದ ಸದ್ಭಾವನಾ ಪಾದಯಾತ್ರೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಪಶು-ಪಕ್ಷಿಗಳಂತೆ ಮನುಷ್ಯ ದುಡಿದು ತಿನ್ನುವುದನ್ನು ಕಲಿಯಬೇಕು. ಮತ್ತೊಬ್ಬರು ದುಡಿದ ಹಣದಲ್ಲಿ ಬದುಕಬಾರದು. ಆಶೆಯನ್ನು ಅಳಿದು ಇರುವುದರಲ್ಲಿ ಸಂತೃಪ್ತಿಯನ್ನು ಕಾಣಬೇಕು. ಯಾರು ಒಳ್ಳೆಯದನ್ನು ಹೇಳುತ್ತಾರೋ ಅವರೇ ಗುರುಗಳು. ಗುರುವಿಗೆ ಯಾವುದೇ ಜಾತಿ, ಬೇಧ-ಧರ್ಮವಿಲ್ಲ ಎಂದು ಮುಕ್ತಾಯಕ್ಕಳ ವಚನವನ್ನು ವಿವರಿಸಿದ ಶ್ರೀಗಳು, ದಾನಚಿಂತಾಮಣಿ ಅತ್ತಿಮಬ್ಬೆ, ಅಜ್ಜಗಣ್ಣ ಮುಕ್ತಾಯಕ್ಕರು ಬಾಳಿಹೋದ ಈ ಮಣ್ಣಿನಲ್ಲಿ ನಾವೆಲ್ಲಾ ಬದುಕುತ್ತಿರುವುದು ನಮ್ಮ ಪುಣ್ಯ ಎಂದರು.

ಇದಕ್ಕೂ ಮೊದಲು ದಾನಚಿಂತಾಮಣಿ ಅತ್ತಿಮಬ್ಬೆ ಮಹಾದ್ವಾರದಿಂದ ಶ್ರೀಗಳ ಸದ್ಭಾವನಾ ಪಾದಯಾತ್ರೆ ಆರಂಭವಾಯಿತು. ಬಳಗಾನೂರು ಚನ್ನವೀರ ಶರಣರು ವಿವಿಧ ಶರಣರ ವಚನ, ಭಜನೆಗಳನ್ನು ಹಾಡುತ್ತಾ ಸಾಗಿದರು. ರಸ್ತೆಯುದ್ದಕ್ಕೂ ಮನೆಗಳ ಮುಂದೆ ಹಾಕಿದ ರಂಗೋಲಿಗಳ ಚಿತ್ತಾರ, ತಳಿರು-ತೋರಣಗಳೊಂದಿಗೆ ಪಾದಯಾತ್ರೆಯನ್ನು ಸ್ವಾಗತಿಸಲಾಯಿತು.

ಜನಪ್ರತಿನಿಧಿಗಳು, ಗಣ್ಯರು, ಹಿರಿಯರು, ಗ್ರಾ.ಪಂ ಅಧ್ಯಕ್ಷರು, ಸದಸ್ಯರು, ಜನ ಪ್ರತಿನಿಧಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಸಾವಿರಾರು ಭಕ್ತರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

### ಎನ್‌ಎಸ್‌ಎಸ್ ಶಿಬಿರದ 5ನೇ ದಿನದ ಕಾರ್ಯಕ್ರಮದಲ್ಲಿ ಸಂಚಾರ ಪಿಎಸ್‌ಐ ಶಂಕುತಲಾ ನಾಯಕ

## ಸಂಚಾರಿ ನಿಯಮಗಳನ್ನು ತಪ್ಪದೇ ಪಾಲಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸುರಕ್ಷತೆಯ ದೃಷ್ಟಿಯಿಂದ ಜಾರಿಗೆ ತಂದಿರುವ ಸಂಚಾರಿ ನಿಯಮಗಳನ್ನು ಜನರು ಚಾಚೂ ತಪ್ಪದೇ ಪಾಲಿಸಬೇಕು. ಇದರಿಂದ ದುಬಾರಿ ದಂಡ ಪಾವತಿ ಹಾಗೂ ಅಮೂಲ್ಯವಾದ ಪ್ರಾಣಹಾನಿ ತಪ್ಪುತ್ತದೆ ಎಂದು ಗದಗ ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐ ಶಂಕುತಲಾ ನಾಯಕ ಹೇಳಿದರು.




ಸಮೀಪದ ಹಾತಲಗೇರಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ, ಕೆ.ಎಲ್.ಇ ಸಂಸ್ಥೆಯ ಎಸ್.ಎ. ಮಾನ್ವಿ ಕಾನೂನು ಮಹಾವಿದ್ಯಾಲಯ ಮತ್ತು ಗ್ರಾಮ ಪಂಚಾಯಿತಿಗಳ ಸಂಯುಕ್ತಾಶ್ರಯದಲ್ಲಿ ಜರುಗಿದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ 5ನೇ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾನೂನು-ಕಾಯ್ದೆಗಳು ಜನ ಸಾಮಾನ್ಯರ ಹಿತದೃಷ್ಟಿಯಿಂದ ಜಾರಿಗೆ ಬಂದಿವೆ. ವಾಹನ ಚಾಲನೆ ಮಾಡುವಾಗ ಹೆಲ್ಮೆಟ್ ಧರಿಸಿ, ಸಂಚಾರಿ ನಿಯಮ ಪಾಲನೆ ಮಾಡಿದಲ್ಲಿ ಅಪಘಾತ ತಪ್ಪುವುದಲ್ಲದೆ, ದಂಡ ತೆರುವುದು ಹಾಗೂ ಪ್ರಾಣ ಹಾನಿ ತಪ್ಪಿಸಬಹುದು. ಯುವಜನತೆ, ವಿದ್ಯಾವಂತರೇ ನಿಯಮಗಳನ್ನು ಮೀರುತ್ತಿರುವುದು ವಿಷಾದನೀಯ. ಈ ನಿಟ್ಟಿನಲ್ಲಿ ಇಲಾಖೆ ಸೂಚಿಸುವ ನಿಯಮಗಳನ್ನು ತಪ್ಪದೇ ಪಾಲಿಸಿ ಎಂದರು.

ಕಡ್ಡಾಯವಾಗಿ ಹೆಲ್ಮೆಟ್ ಧರಿಸದಿರುವುದು, ಚಾಲನೆ ವೇಳೆ ಮೊಬೈಲ್ ಬಳಕೆ, ದ್ವಿಚಕ್ರ ವಾಹನದಲ್ಲಿ ತ್ರಿಬಲ್ ರೈಡಿಂಗ್, ಮದ್ಯಪಾನ ಮಾಡಿ ಚಾಲನೆ, ಸೀಟ್ ಬೆಲ್ಟ್ ಧರಿಸದಿರುವುದು, ಸೈಡ್ ಮಿರರ್ ಇಲ್ಲದ ವಾಹನ, ತುರ್ತು ವಾಹನಗಳಿಗೆ ದಾರಿ ಬಿಡದಿರುವುದು, ಅಜಾಗರೂಕತೆಯ ವಾಹನ ಚಾಲನೆ, ಮುಖ್ಯವಾಗಿ ಅಪ್ರಾಪ್ತರ ವಾಹನ ಚಾಲನೆ ಕಡ್ಡಾಯ ನಿಷೇಧ ಎಂದು ತಿಳಿಸಿದರು.

ಎಎಸ್‌ಐ ಎಚ್.ಡಿ. ಗಡದ ಪ್ರಾಸ್ತಾವಿಕವಾಗಿ ಮಾತನಾಡಿದರು. ದೈಹಿಕ ಶಿಕ್ಷಕ ಕೆ.ಎಸ್. ಸ್ವಂಟಿ, ಶಿಕ್ಷಕ ಎಚ್.ಡಿ. ಕುರಿ, ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಡಾ. ಸಿ.ಬಿ. ರಣಗಟ್ಟಿಮಠ ಮುಂತಾದವರಿದ್ದರು. ಯಮನಪ್ಪ ತಳವಾರ ಸ್ವಾಗತಿಸಿದರು. ಬಸವರಾಜ ಕರಡಿ ನಿರೂಪಿಸಿದರು. ಎನ್. ಭಾಗ್ಯಲಕ್ಷ್ಮೀ ವಂದಿಸಿದರು.

## ಸಂಪಾದಕೀಯ

### ಲೋಕಸಭೆಗೆ ದಿಕ್ಸೂಚಿಯಾಗುತ್ತಾ ಪಂಚರಾಜ್ಯ ಚುನಾವಣೆ ಫಲಿತಾಂಶ?

ಕಾಂಗ್ರೆಸ್ ಮುಕ್ತ ಭಾರತದ ಸಂಕಲ್ಪದೊಂದಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಪಕ್ಷಕ್ಕೆ, ಪಂಚ ರಾಜ್ಯ ಚುನಾವಣೆ ಫಲಿತಾಂಶ ಆಘಾತ ನೀಡಲಿದೆ ಎನ್ನುವುದು ಮತದಾನೋತ್ತರ ಸಮೀಕ್ಷೆಯಿಂದ ಸ್ಪಷ್ಟವಾಗುತ್ತಿದೆ.

ವಿಶೇಷವಾಗಿ ಛತ್ತೀಸ್‌ಗಢ ವಿಧಾನಸಭೆ ಚುನಾವಣೆ ಫಲಿತಾಂಶ ಮತ್ತೆ ಕಾಂಗ್ರೆಸ್ ಪರವಾಗಿರುವುದು ಬಿಜೆಪಿಗೆ ಆಘಾತ ಉಂಟುಮಾಡಿದೆ. 2003 ರಿಂದ ಸತತವಾಗಿ ಮೂರು ಅವಧಿಗೆ ಅಧಿಕಾರ ನಡೆಸಿದ ಬಿಜೆಪಿಗೆ ಮತ್ತೊಮ್ಮೆ ಅಧಿಕಾರ ಹಿಡಿಯೋದು ಅಷ್ಟೇ ಕಷ್ಟವಾಗಿದೆ.

ಸಿ ವೋಟರ್ ಸೇರಿದಂತೆ ಪ್ರಮುಖ ಐದು ಸಂಸ್ಥೆಗಳು ನಡೆಸಿದ ಮತದಾನೋತ್ತರ ಸಮೀಕ್ಷೆಯಲ್ಲಿ ಛತ್ತೀಸ್‌ಗಢದಲ್ಲಿ ಈ ಬಾರಿಯೂ ಕಾಂಗ್ರೆಸ್ ಕಮಾಲ್ ಮಾಡಲಿದೆ ಎಂದೇ ಉಲ್ಲೇಖವಾಗಿದೆ. ಕರ್ನಾಟಕ ಮಾದರಿಯಲ್ಲಿ ಬಿಜೆಪಿ ಛತ್ತೀಸ್‌ಗಢದ ಜನರಿಗೆ ಅನೇಕ ಭರವಸೆಗಳನ್ನ ನೀಡಿದ್ದರು, ಜನ ಮಾತ್ರ ಕಾಂಗ್ರೆಸ್ ಪರ ಒಲವು ತೋರಿದ್ದಾರೆ.

ಇನ್ನು ರಾಜಸ್ಥಾನದಲ್ಲಿ ಬಿಜೆಪಿ ಸ್ಪಷ್ಟ ಬಹುಮತ ದಾಖಲಿಸಲಿದೆ. ತೆಲಂಗಾಣದಲ್ಲಿ ಕಾಂಗ್ರೆಸ್ ಈ ಬಾರಿ ಅಧಿಕಾರಕ್ಕೆ ಬರಲಿದೆ. ಮಧ್ಯಪ್ರದೇಶದಲ್ಲಿ ತೀವ್ರ ಸ್ಪರ್ಧೆ ಎದುರಾಗಿದ್ದು ಒಂದೆರಡು ಸ್ಥಾನಗಳ ಅಂತರದಲ್ಲಿ ಬಿಜೆಪಿ ಅಥವಾ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ. ಅದೇ ರೀತಿ ಮಿಜೋರಾಂ ರಾಜ್ಯದಲ್ಲಿ ಎಂಎನ್‌ಎಫ್ ಪಕ್ಷ ಅಧಿಕಾರಕ್ಕೆ ಬರಲಿದೆ ಎನ್ನುವುದು ಮತದಾನೋತ್ತರ ಸಮೀಕ್ಷೆಯ ಸಾರಾಂಶ.

ಒಟ್ಟಾರೆ ಪಂಚರಾಜ್ಯ ಚುನಾವಣೆಯಲ್ಲಿ ಈ ಬಾರಿ ಕಾಂಗ್ರೆಸ್ ಹಿಂದಿಗಿಂತ ಹೆಚ್ಚಿನ ಸ್ಥಾನಗಳನ್ನು ಗಳಿಸುವ ನಿರೀಕ್ಷೆ ಮೂಡಿಸಿದೆ. ಪಂಚರಾಜ್ಯ ಚುನಾವಣೆ ಫಲಿತಾಂಶ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರತಿಫಲಿಸಲಿದೆ ಎನ್ನುವುದು ರಾಜಕೀಯ ಪಂಡಿತರ ಲೆಕ್ಕಾಚಾರ.

ಲೋಕಸಭೆ ಚುನಾವಣೆ ಪೂರ್ವದಲ್ಲಿಯೂ ಅನೇಕ ಸಂಸ್ಥೆಗಳು ದೇಶದಲ್ಲಿ ಸಮೀಕ್ಷೆಗಳನ್ನ ನಡೆಸಿವೆ. ಎಲ್ಲ ಸಮೀಕ್ಷೆಗಳಲ್ಲಿ ಈ ಬಾರಿ ಕಾಂಗ್ರೆಸ್ ಬಲ ಹೆಚ್ಚಲಿದೆ ಎನ್ನುವುದನ್ನು ಹೇಳುತ್ತಿವೆ. ಪಂಚರಾಜ್ಯ ಚುನಾವಣೆ ಮತ್ತು ಲೋಕಸಭೆ ಚುನಾವಣಾ ಪೂರ್ವದ ಸಮೀಕ್ಷೆಯನ್ನು ಗಮನಿಸಿದರೆ, ಕೇಂದ್ರದಲ್ಲಿ ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಏರದಿದ್ದರೂ ತನ್ನ ಬಲವನ್ನ ಹೆಚ್ಚಿಸಿಕೊಳ್ಳುವುದಂತು ನಿಜ.

### ಸ್ವಿಟ್ಜರ್ಲ್ಯಾಂಡ್‌ನಲ್ಲಿ ಹುಟ್ಟಿದ 'ಮ್ಯಾಗಿ ನೂಡಲ್ಸ್' ಪ್ರಪಂಚದ ಮನ ಗೆದ್ದ ಬಗೆ

# ಎಲ್ಲರ ನೆಚ್ಚಿನ ಮ್ಯಾಗಿ ನೂಡಲ್ಸ್ ಹಿಂದಿನ ಕಥೆ

ಪ್ರಪಂಚದಾದ್ಯಂತ ಎಲ್ಲಾ ವರ್ಗದವರ, ಎಲ್ಲಾ ವಯೋಮಾನದವರ ಮನಸ್ಸನ್ನೂ ಗೆದ್ದ ಮ್ಯಾಗಿ ಬ್ರ್ಯಾಂಡ್‌ನ ಉದಯ ಕುತೂಹಲಕಾರಿಯಾಗಿದೆ. ಮ್ಯಾಗಿ ನೂಡಲ್ಸ್‌ನ ಹಿನ್ನೆಲೆ ಪ್ರಾರಂಭವಾಗುವುದು 19ನೇ ಶತಮಾನದ ಉತ್ತರಾರ್ಧದಲ್ಲಿ, ಸ್ವಿಟ್ಜರ್ಲ್ಯಾಂಡ್‌ನ ಮನಮೋಹಕ ಪಟ್ಟಣವಾದ ಕೆಂಪಥಾಲ್‌ನಲ್ಲಿ. ಯುವ ಉದ್ಯಮಿ ಜೂಲಿಯಸ್ ಮ್ಯಾಗಿ ಅಡುಗೆಮನೆಯಲ್ಲಿ ಹೊಸದೊಂದು ಕ್ರಾಂತಿಯನ್ನೇ ಸೃಷ್ಟಿಸಿಬಿಟ್ಟ.

ಆಗಲೂ ಕೂಡ ಜನ ಇಂದಿನಷ್ಟೇ ದುಡಿಮೆಯಲ್ಲಿ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆಯಿತ್ತು. ಮನೆಯ ಅನ್ನಪೂರ್ಣೆಯರಿಗೆ ಪೌಷ್ಟಿಕ ಆಹಾರವನ್ನು ಫಟಾಫಟ್ ತಯಾರಿಸಿಕೊಳ್ಳಬೇಕಾದ ಅನಿವಾರ್ಯತೆ, ಅಗತ್ಯ ಖಂಡಿತವಾಗಿಯೂ ಇತ್ತು. ಈ ಅಗತ್ಯವನ್ನು ಗುರುತಿಸಿದ ಜೂಲಿಯಸ್ ಮ್ಯಾಗಿ ಒಂದೆರಡು ನಿಮಿಷಗಳಲ್ಲೇ ತಯಾರಿಸಬಹುದಾದ ಸಾಂದ್ರೀಕೃತ, ವಿಶಿಷ್ಟ ಸ್ವಾದಭರಿತ ಸೂಪ್ ಮಿಶ್ರಣಕ್ಕಾಗಿ ಹೊಸ ಸೂತ್ರವನ್ನು ಅಭಿವೃದ್ಧಿಪಡಿಸಿದ. ಇದೇ ಸೂತ್ರದಿಂದ ಸಿದ್ಧವಾದ 'ಮ್ಯಾಗಿ' ಬ್ರಾಂಡ್ ಆಗಲು ಅಡಿಪಾಯ ಹಾಕಿತು. ಅಸಲಿಗೆ ಮ್ಯಾಗಿಯ ಕನಸು 1884ರಲ್ಲಿ ರೂಪುಗೊಂಡಿದ್ದು ಸೂಪ್ ಅವತಾರದಲ್ಲಿ.

ಈ ಸಿದ್ಧ ಸೂಪ್‌ಗಳು ಕೆಲವೇ ಸಯದಲ್ಲಿ ಭಾರೀ ಜನಪ್ರಿಯತೆ ಗಳಿಸಿದವು. ಮ್ಯಾಗಿ ಅಲ್ಲಿಗೇ ಸುಮ್ಮನಾಗಲಿಲ್ಲ. ಮ್ಯಾಗಿ ಲಿಕ್ವಿಡ್ ಮಸಾಲೆ ಸಾಸ್ ಅನ್ನು ಕಂಡುಹಿಡಿದರು. ಅದರ ಬೆನ್ನಿಗೇ ಜನಪ್ರಿಯ ಮ್ಯಾಗಿ ಬೌಲಾನ್ ಕ್ಯೂಬ್‌ಗಳ ಸಂಶೋಧನೆಯಾಯಿತು. ಅದರ ಎಲ್ಲಾ ಉತ್ಪನ್ನಗಳು ಶೀಘ್ರವಾಗಿ ಸ್ಥಳೀಯ ಸ್ವಿಟ್ಜರ್ಲ್ಯಾಂಡ್‌ನಿಂದ ನೈಜೀರಿಯಾ, ಶ್ರೀಲಂಕಾ ಮತ್ತು ಮಲೇಷ್ಯಾದಿಂದ ವಿಶ್ವದ ಮೂಲೆ ಮೂಲೆಗೆ ಹರಡಿತು. 1947ರಲ್ಲಿ ನೆಸ್ಲೆ ಮ್ಯಾಗಿ ಬ್ರಾಂಡ್ ಅನ್ನು ಸ್ವಾಧೀನಪಡಿಸಿಕೊಂಡಿತು.

ಮ್ಯಾಗಿ ತನ್ನ ಜಾಗತಿಕ ವಿಸ್ತರಣೆಯನ್ನು ಪ್ರಾರಂಭಿಸಿದ ನಂತರ ಇಂದಿಗೂ ಅದೇ ವೇಗದಲ್ಲಿ ಮುಂದುವರಿಯುತ್ತಿದೆ. 1982ರಲ್ಲಿ ಸ್ವಿಸ್‌ನ ಪ್ರಸಿದ್ಧ ಬಹುರಾಷ್ಟ್ರೀಯ ಕಂಪನಿಯಾದ ನೆಸ್ಲೆ ಮ್ಯಾಗಿ ನೂಡಲ್ಸ್‌ನ್ನು ಭಾರತೀಯ ಮಾರುಕಟ್ಟೆಗೆ ಪರಿಚಯಿಸಿತು. ಭಾರತದಲ್ಲಿಯೂ ಕೂಡ ಮ್ಯಾಗಿ ನೂಡಲ್ಸ್ ಮ್ಯಾಜಿಕ್ ಮಾಡಿದೆಯಾದರೂ ಆರಂಭದ ಹಾದಿ ಸುಗಮವಾಗಿರಲಿಲ್ಲ.



ಆರಂಭಿಕ ದಿನಗಳಲ್ಲಿ ಕಠಿಣ ಹೋರಾಟವನ್ನು ಎದುರಿಸಿತು. ತ್ವರಿತ ಮತ್ತು ರುಚಿಕರವಾದ ಊಟದ ಭರವಸೆ ನೀಡಿದ ಈ ವಿದೇಶಿ ಉತ್ಪನ್ನದ ಬಗ್ಗೆ ಭಾರತೀಯರಲ್ಲಿ ಅನುಮಾನವಿತ್ತು. ಆರಂಭಿಕ ಮಾರ್ಕೆಟಿಂಗ್ ಅಭಿಯಾನಗಳು ಜನಸಾಮಾನ್ಯರಲ್ಲಿ ಪರಿಣಾಮ ಬೀರುವಲ್ಲಿ ವಿಫಲವಾದವು. ಆದರೆ, ನೆಸ್ಲೆ ಪಟ್ಟು ಬಿಡಲಿಲ್ಲ ನೋಡಿ! ಹೊಸ ಹೊಸ ತಂತ್ರಗಳೊಂದಿಗೆ ಮುಂದುವರೆಯಿತು.

ಪ್ರತಿಯೊಂದು ಪ್ರಯಾಣಕ್ಕೂ ಏರಿಳಿತಗಳಿರುತ್ತವೆಯಲ್ಲ, ಹಾಗೆಯೇ ಮ್ಯಾಗಿಯ ಯಶಸ್ಸಿನ ಕಥೆಯೂ ಇದಕ್ಕೆ ಹೊರತಾಗಿರಲಿಲ್ಲ. 2015ರಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಮ್ಯಾಗಿ ನೂಡಲ್ಸ್ ಮಾದರಿಗಳಲ್ಲಿ ಅತಿಯಾದ ಸೀಸ ಮತ್ತು ಎಂಎಸ್‌ಜಿ ಅಂಶವಿದೆ ಎಂದು ವರದಿ ಮಾಡಿದಾಗ ನೆಸ್ಲೆ ಅತಿದೊಡ್ಡ ಸವಾಲನ್ನು ಎದುರಿಸಿತು, ರಾಷ್ಟ್ರವ್ಯಾಪಿ ವಿವಾದವನ್ನೂ ಹುಟ್ಟುಹಾಕಿತು. ಇದು ಮ್ಯಾಗಿ ನೂಡಲ್ಸ್ ಮೇಲೆ ತಾತ್ಕಾಲಿಕ ನಿಷೇಧಕ್ಕೆ ಕಾರಣವಾಯಿತು. ಭಾರತೀಯ ಗ್ರಾಹಕರ ವಿಶ್ವಾಸವನ್ನು ಪುನಃ ಸ್ಥಾಪಿಸಲು ದಣಿವರಿಯದೆ ಕೆಲಸ ಮಾಡಿತು. ಗುಣಮಟ್ಟದ ಕಠಿಣ ಪರೀಕ್ಷೆಗಳ ನಂತರ, ಕಟ್ಟುನಿಟ್ಟಾದ ಗುಣಮಟ್ಟದ ಮಾನದಂಡಗಳು ಮತ್ತು ಆಹಾರ ಸುರಕ್ಷತೆಗೆ ನವೀಕರಿಸಿದ ಬದ್ಧತೆಯೊಂದಿಗೆ ಮ್ಯಾಗಿ ನೂಡಲ್ಸ್ ಕೆಲವೇ ತಿಂಗಳುಗಳಲ್ಲಿ ಮಾರುಕಟ್ಟೆಗೆ ಹಿಂದಿರುಗಿತು.

ಇಂದು, ಮ್ಯಾಗಿ ತಲೆಮಾರುಗಳು ಮತ್ತು ಸಾಮಾಜಿಕ-ಆರ್ಥಿಕ ಗಡಿಗಳನ್ನೂ ಮೀರಿ ಭಾರತೀಯ ಕುಟುಂಬಗಳ ಅವಿಭಾಜ್ಯ ಅಂಗವಾಗಿದೆ. ಹಾಸ್ಟೆಲ್, ವಸತಿ ನಿಲಯಗಳಿಂದ ಹಿಡಿದು ಗದ್ದಲದ ಮನೆಗಳವರೆಗೆ, ಮ್ಯಾಗಿ ನೂಡಲ್ಸ್ ಲಕ್ಷಾಂತರ ಜನರ ಮನಗೆದ್ದಿತು. ಸ್ವಿಸ್ ಪರ್ವತಗಳಲ್ಲಿ ಸೂಪ್ ಮಿಶ್ರಣದ ಪ್ರಯೋಗವಾಗಿ ಪ್ರಾರಂಭವಾದ ಇದು ಅಂತಿಮವಾಗಿ ಭಾರತೀಯರು ಆಹಾರವನ್ನು ಬೇಯಿಸುವ ಮತ್ತು ಸೇವಿಸುವ ವಿಧಾನದಲ್ಲಿ ಕ್ರಾಂತಿಯನ್ನುಂಟು ಮಾಡಿದ ಅಪ್ರತಿಮ ಬ್ರಾಂಡ್ ಆಗಿ ರೂಪಾಂತರಗೊಂಡಿತು.

**– ಅಲೆಮಾರಿ.**

### ಕೊಣಂದೂರಿನ ಧರ್ಮ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಜೀವನ ವಿಕಸನಕ್ಕೆ ಗುರುವಿನ ಜ್ಞಾನ ಬೋಧಾಮೃತ ಅವಶ್ಯಕ

**■ ವಿಜಯಸಾಕ್ಷಿ ಸುದ್ದಿ, ರಿಪ್ಪನ್‌ಪೇಟೆ**

ಮಾನವ ಜನ್ಮ ಅತ್ಯಂತ ಪವಿತ್ರವಾದುದು. ಅರಿವು, ಸಂಸ್ಕಾರಗಳ ಮೂಲಕ ಮನುಷ್ಯನ ಬದುಕು ಉಜ್ವಲಗೊಳ್ಳಬೇಕಾಗಿದೆ. ಗುರು ಮತ್ತು ಗುರಿಯನ್ನು ಹೊಂದಿ ನಡೆದಿದ್ದೇ ಹೌದಾದರೆ, ಎಲ್ಲರ ಜೀವನವೂ ಸಾರ್ಥಕಗೊಳ್ಳುತ್ತದೆ. ಜೀವನ ವಿಕಸನಕ್ಕೆ ಗುರುವಿನ ಜ್ಞಾನ ಬೋಧಾಮೃತ ಅವಶ್ಯಕವಾಗಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ಕೊಣಂದೂರಿನಲ್ಲಿ ಶ್ರೀ ವೀರಭದ್ರೇಶ್ವರ ಇಂಡಸ್ಟ್ರೀಸ್ ನೂತನ ಕಟ್ಟಡ ಉದ್ಘಾಟಿಸಿ, ಇಷ್ಟಲಿಂಗ ಮಹಾಪೂಜಾ ನೆರವೇರಿಸಿ, ನಂತರ ಜರುಗಿದ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಕಲಿಕೆ, ಗಳಿಕೆ ಮತ್ತು ಭಗವಂತನ ಚಿಂತನೆಯಲ್ಲಿ ಹೆಜ್ಜೆ ಹಾಕಿದರೆ ಬದು-ಕಿಗೆ ಬೆಲೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಮಾನವೀಯ ಸಂಬಂಧಗಳು ಸಡಿಲಗೊಳ್ಳುತ್ತಿರುವ ಇಂದಿನ ದಿನಗಳಲ್ಲಿ, ಸಂಬಂಧಗಳನ್ನು ಬೆಸೆಯುವ ಕೆಲಸ ಮಾಡಬೇಕಾಗಿದೆ. ಕೆ.ಆರ್. ಪ್ರಕಾಶ ಸಹೋದರರು ಯಾವುದೇ ವಿಶೇಷ ಕಾರ್ಯಗಳಿರಲಿ, ಕಟ್ಟಡಗಳ ಉದ್ಘಾಟನೆಗಳ ಸಂದರ್ಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳವರ ಇಷ್ಟಲಿಂಗ ಮಹಾಪೂಜಾ ನೆರವೇರಿಸಿಕೊಂಡು ಬರುತ್ತಿರುವುದು ಧರ್ಮ ಪೀಠದ ಬಗ್ಗೆ ಅವರಲ್ಲಿರುವ ಶ್ರದ್ಧೆಯನ್ನು ತೋರಿಸುತ್ತದೆ ಎಂದರು.

ಕವಲೇದುರ್ಗದ ಭುವನಗಿರಿ ಮಠದ ಮರುಳಸಿದ್ಧ ಶಿವಾಚಾರ್ಯರು ವಾಸ್ತು ಶಾಂತಿ, ಹೋಮ-ಹವನಗಳನ್ನು ನೆರವೇರಿಸಿದರು. ಮಳಲಿ ಮಠದ, ತೊಗರ್ಸಿ ಮಳೇಮಠದ, ಕೊಣಂದೂರು ಬೃಹನ್ಮಠದ, ಕಡೆನಂದಿಹಳ್ಳಿ ಶ್ರೀ ರೇವಣಸಿದ್ಧೇಶ್ವರ ಪುಣ್ಯಾಶ್ರಮದ ಶ್ರೀಗಳು ಸಮಾರಂಭದಲ್ಲಿ ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳ ಆಶೀರ್ವಾದ ಪಡೆದರು.

ಗೌರಿಗದ್ದೆ ಅವಧೂತ ಆಶ್ರಮದ ವಿನಯ ಗುರೂಜಿ ಶ್ರೀ ರಂಭಾಪುರಿ ಜಗದ್ಗುರುಗಳಿಗೆ ಗೌರವ ಸಮರ್ಪಣೆ ಸಲ್ಲಿಸಿ ಮಾತನಾಡಿದರು. ಮಾತೋಶ್ರೀ ಪಾರ್ವತೆಮ್ಮ ರೇವಣ್ಣನವರ ಎಲ್ಲ ಮಕ್ಕಳು, ಅವರ ಆಪ್ತ ಬಂಧು-ಮಿತ್ರರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದು ಶ್ರೀ ರಂಭಾಪುರಿ ಜದ್ಗುರುಗಳಿಂದ ಆಶೀರ್ವಾದ ಪಡೆದರು. ಕೆ.ಆರ್. ಪ್ರಕಾಶ ಸರ್ವರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.



ಜೀವನ ಉತ್ಕರ್ಷತೆಗೆ ಆದರ್ಶ ಮೌಲ್ಯಗಳು ಉತ್ಥಾನಗೊಳ್ಳಬೇಕಾಗಿದೆ. ಮಾತು-ಮನ-ಕೃತಿ ಒಂದಾಗಿ ಶ್ರಮಿಸಿದರೆ ಜೀವನದಲ್ಲಿ ಶ್ರೇಯಸ್ಸು ಕಟ್ಟಿಟ್ಟ ಬುತ್ತಿ. ವೀರಶೈವ ಧರ್ಮ ಸಿದ್ಧಾಂತದಲ್ಲಿ ಗುರುವಿಗೆ ಪ್ರಥಮ ಸ್ಥಾನ ಕಲ್ಪಿಸಿದ್ದಾರೆ. ಪರಶಿವನ ಸಾಕಾರ ರೂಪವೇ ಶ್ರೀ ಗುರುವೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಜೀವನದಲ್ಲಿ ಗುರಿ ಮತ್ತು ಧ್ಯೇಯ ಇಲ್ಲದ ಕಾರಣ ಮನುಷ್ಯ ದಿಕ್ಕು, ದಾರಿ ತಪ್ಪಿ ನಡೆದು ಬದುಕಿನಲ್ಲಿ ಕಷ್ಟಗಳನ್ನು ಅನುಭವಿಸುವ ಪರಿಸ್ಥಿತಿ ಬಂದಿದೆ. ಆಹಾರ, ನೀರು ದೈಹಿಕ ವಿಕಾಸಕ್ಕೆ ಕಾರಣವಾದರೆ, ಧರ್ಮ ಬದುಕನ್ನು ವಿಕಾಸಗೊಳಿಸಿ ಅಭಿವೃದ್ಧಿಯತ್ತ ಸಾಗಿಸುತ್ತದೆ.

**– ಡಾ.ವೀರಸೋಮೇಶ್ವರ ಜಗದ್ಗುರುಗಳು.**
**ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.**

## ಅರ್ಜಿ ಆಹ್ವಾನ

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ನ್ಯಾಯಾಂಗ ಇಲಾಖೆಯಲ್ಲಿ ಖಾಲಿ ಇರುವ ಶೀಘ್ರಲಿಪಿಗಾರ ಗ್ರೇಡ್ –3, ಬೆರಳಚ್ಚುಗಾರ, ಬೆರಳಚ್ಚುಗಾರ ನಕಲುಗಾರ ಮತ್ತು ಜವಾನ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ಪಾವತಿಸಲು ಕೊನೆಯ ದಿನಾಂಕ ಡಿಸೆಂಬರ್ 28 ಆಗಿದ್ದು, ಗದಗ ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್ https://gadag.dcourts.gov.in/notice-category/recruitments ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮುಖ್ಯ ಆಡಳಿತಾಧಿಕಾರಿಗಳು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಗದಗ ಇವರನ್ನು ಸಂಪರ್ಕಿಸಬಹುದಾಗಿದೆ.

## ವಾಣಿಜ್ಯ ಸಿಲಿಂಡರ್ 21 ರೂ. ಹೆಚ್ಚಳ

**■ ವಿಜಯಸಾಕ್ಷಿ ಸುದ್ದಿ, ನವದೆಹಲಿ**

ತಿಂಗಳ ಆರಂಭದಲ್ಲೇ ತೈಲ ಮಾರುಕಟ್ಟೆ ಕಂಪನಿಗಳು 19 ಕೆಜಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ದರವನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ 21 ರೂ.ಗಳಷ್ಟು ಏರಿಕೆ ಮಾಡಿದೆ. ಅಡುಗೆ ಅನಿಲ ದರದಲ್ಲು ಬೆಲೆಯಲ್ಲಿ ಯಾವುದೇ ಏರಿಕೆ ಮಾಡಿಲ್ಲ. ಈ ಹಿಂದೆ ಕೇಂದ್ರ ಸರ್ಕಾರ ಅಡುಗೆ ಅನಿಲ ದರವನ್ನು 200 ರೂ.ಗಳು ಕಡಿಮೆ ಮಾಡಿತ್ತು. ಈ ದರ ಏರಿಕೆಯಿಂದ ರಾಜಧಾನಿ ದೆಹಲಿಯಲ್ಲಿ ಪ್ರತಿ ವಾಣಿಜ್ಯ ಸಿಲಿಂಡರ್ ದರ 1.775.50 ರೂ.ನಿಂದ 19796.5 ರೂ.ಗೆ ಹೆಚ್ಚಳವಾಗಿದೆ.

# ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಕೆಗೆ ಸರಕಾರ ಬದ್ಧ: ತಂಗಡಗಿ

**■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ಅತಿಥಿ ಉಪನ್ಯಾಸಕರ ಕಾಯಮಾತಿ ಬೇಡಿಕೆ ಇವತ್ತಿನದ್ದೇನಲ್ಲ. ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಅವರ ಬೇಡಿಕೆ ಈಡೇರಿಕೆಗೆ ಸರಕಾರ ಬದ್ಧವಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಭರವಸೆ ನೀಡಿದರು.

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಅನಿರ್ದಿಷ್ಟಾವಧಿ ಧರಣಿನಿರತ ಅತಿಥಿ ಉಪನ್ಯಾಸಕರನ್ನು ಶುಕ್ರವಾರ ಭೇಟಿ ಮಾಡಿ, ಅವರ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಸರಕಾರಕ್ಕೆ ಅತಿಥಿ ಉಪನ್ಯಾಸಕರ ಕುರಿತು ಅಪಾರ ಗೌರವವಿದೆ ಎಂದರು.

ಹಿಂದಿನ ಸರಕಾರದಲ್ಲೂ ಅತಿಥಿ ಉಪನ್ಯಾಸಕರು ಹೋರಾಟ ನಡೆಸಿದ್ದು, ಗೌರವಧನ ಹೆಚ್ಚಳವಾಗಿರುವುದು ಗೊತ್ತಿದೆ. ಈಗ ಸೇವಾ ಕಾಯಂ ಬೇಡಿಕೆಯ ಆಗ್ರಹವನ್ನು ಸರಕಾರ ಗಮನಿಸುತ್ತಿದೆ. ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆ ಉಂಟಾಗುತ್ತಿದೆ. ಸರಕಾರ ನಿಮ್ಮ ಪರವಾಗಿದ್ದು ಧರಣಿ ಹಿಂಪಡೆಯುವಂತೆ ಮನವಿ ಮಾಡಿದರು.

ಬೆಳಗಾವಿ ಅಧಿವೇಶನದಲ್ಲಿ ಈ ಬಗ್ಗೆ ಚರ್ಚೆಯಾದರೆ ಬಹುಶಃ ಬೇಡಿಕೆ ಈಡೇರಿಕೆಯನ್ನು ಸರಕಾರ ಗಂಭೀರವಾಗಿ ಪರಿಗಣಿಸುತ್ತದೆ. ಆದರೆ ನಾನು ಬೇರೆ ಇಲಾಖೆಯ ಸಚಿವವಾಗಿ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಈ ಧರಣಿ ಕುರಿತು ಪ್ರಸ್ತಾಪಿಸುವುದು ಸಮಂಜಸವಲ್ಲ. ವಿವಿಧ ಶಾಸಕರು ಈ ಬಗ್ಗೆ ಧ್ವನಿ ಎತ್ತಿದರೆ ಅಧಿವೇಶನದಲ್ಲಿ ಖಂಡಿತವಾಗಿ ಅತಿಥಿ ಉಪನ್ಯಾಸಕರ ಪರ ಮಾತನಾಡುವುದಾಗಿ ಆಶ್ವಾಸನೆ ನೀಡಿದರು.

ಅತಿಥಿ ಉಪನ್ಯಾಸಕರಾದ ಪ್ರಕಾಶ್ ಬಳ್ಳಾರಿ ನಿರೂಪಿಸಿದರು. ಸಣ್ಣದೇವೇಂದ್ರಸ್ವಾಮಿ ಸ್ವಾಗತಿಸಿದರು. ಬಸವರಾಜ ಕರುಗಲ್ ವಂದಿಸಿದರು. ಡಾ.ವೀರಣ್ಣ ಸಜ್ಜನರ್, ಜ್ಞಾನೇಶ್ವರ ಪತ್ತಾರ, ಗೀತಾ ಬನ್ನಿಕೊಪ್ಪ, ಶಿವಬಸಪ್ಪ ಮಸ್ಕಿ, ವಿಜಯಕುಮಾರ್ ಕುಲಕರ್ಣಿ, ಡಾ.ಗಿರಿಜಾ ತುರುಮುರಿ ಸಚಿವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಹಾಂತೇಶ ನೆಲಾಗಣಿ, ಕಲ್ಲಯ್ಯ ಅಬ್ಬಿಗೇರಿ, ವಿಜಯ ತೋಟದ, ಪ್ರಕಾಶ್ ಜಡಿಯವರ, ಡಾ.ತುಕಾರಾಂ ನಾಯಕ, ಸಂತೋಷಿ ಬೆಲ್ಲದ್, ಪ್ರದೀಪ್ ಪಲ್ಲೇದ್, ಮಹೇಶ, ಮಹಾಂತೇಶ, ತಾಯಪ್ಪ, ರಾಘವೇಂದ್ರ, ಮಂಜುನಾಥ, ಮಲ್ಲಿಕಾರ್ಜುನ, ಬಸವರಾಜ, ಶಿವರಾಜ, ಕಲ್ಲಯ್ಯಸ್ವಾಮಿ, ಡಾ.ಗೀತಾ, ಸರಸ್ವತಿ, ಉಷಾ, ಆಶಾ, ಗೋಣಿಬಸಪ್ಪ, ಶಿವಪ್ರಸಾದ್ ಮತ್ತಿತರರು ಇದ್ದರು.




"ಸರಕಾರ ನಮ್ಮ ಸೇವೆಯನ್ನು ಕಾಯಂಗೊಳಿಸದ ಹೊರತು ಹೋರಾಟವನ್ನು ಹಿಂಪಡೆಯುವ ಪ್ರಶ್ನೆಯೇ ಇಲ್ಲ. ಇದು ವೇತನರಹಿತ ಹೋರಾಟವಾಗಿದ್ದು ಪಾಠ-ಪ್ರವಚನಕ್ಕೆ ಮುಂದಾಗುವ ಅತಿಥಿ ಉಪನ್ಯಾಸಕರಿಗೆ ಒತ್ತಾಯ ಮಾಡುವುದಿಲ್ಲ. ಅನಗತ್ಯ ಊಹಾಪೋಹಗಳಿಗೆ ಕಿವಿಗೊಡಬೇಡಿ. ವರ್ಷದ ಸೇವೆ ಇರುವವರನ್ನು ಸಹ ಸರಕಾರ ಹಂತ ಹಂತವಾಗಿಯಾದರೂ ಕಾಯಂ ಮಾಡಲೇಬೇಕು."

**– ಡಾ.ಹನುಮಂತಗೌಡ ಕಲ್ಮನಿ,** ರಾಜ್ಯಾಧ್ಯಕ್ಷರು, ಅತಿಥಿ ಉಪನ್ಯಾಸಕರ ಸಂಘ.

"ಅತಿಥಿ ಉಪನ್ಯಾಸಕರ ಸೇವಾಭದ್ರತೆಗೆ ಸಂಬಂಧಿಸಿದಂತೆ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ನಮ್ಮ ಸರಕಾರ ನಡೆದುಕೊಳ್ಳುತ್ತದೆ. ಈಗಾಗಲೇ 5 ಗ್ಯಾರಂಟಿ ಯೋಜನೆಗಳ ಪೈಕಿ 4 ಯೋಜನೆಗಳು ಜಾರಿಯಾಗಿವೆ. ಯುವನಿಧಿ ಹೊಸ ವರ್ಷಾರಂಭಕ್ಕೆ ಚಾಲನೆಗೊಳ್ಳಲಿದೆ. 6ನೇ ಗ್ಯಾರಂಟಿಯಾಗಿ ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಕೆಗೆ ಸರಕಾರದ ಗಮನಕ್ಕೆ ತರಲಾಗುವುದು."

**– ಶಿವರಾಜ ತಂಗಡಗಿ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು.

ಮೂಗಿಗೆ ತುಪ್ಪ ಸವರುವ ಕೆಲಸ ಬೇಡ: ಸರಕಾರ ಅತಿಥಿ ಉಪನ್ಯಾಸಕ ಮುಖಂಡರ ಸಭೆ ಕರೆದು ಮೂಗಿಗೆ ತುಪ್ಪ ಸವರುವ ಕೆಲಸ ಮಾಡುವುದು ಬೇಡ. ಸರಕಾರದ ಇಂದಿನ ಸಭೆಗೆ ಧರಣಿ ಬೇಡ ಎಂದವರನ್ನು ಆಹ್ವಾನಿಸಿ ನಮ್ಮಲ್ಲೇ ಒಡಕುಂಟು ಮಾಡುವ ಕೆಲಸಕ್ಕೆ ಕೈ ಹಾಕಿದೆ ಎಂದು ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಡಾ.ಹನುಮಂತಗೌಡ ಕಲ್ಮನಿ ಆಕ್ರೋಶ ವ್ಯಕ್ತಪಡಿಸಿದರು.

ಶುಕ್ರವಾರ ಅತಿಥಿ ಉಪನ್ಯಾಸಕರ ಪ್ರತಿಭಟನಾ ಮೆರವಣಿಗೆಗೆ ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮನ್ನು ಒಡೆಯುವ ಸರಕಾರದ ಹುನ್ನಾರ ಫಲ ನೀಡದು. ಸೇವಾ ಕಾಯಮಾತಿಯ ಲಿಖಿತ ಉತ್ತರ ಬರುವವರೆಗೆ ಹೋರಾಟ ನಿಲ್ಲದು ಎಂದು ಎಚ್ಚರಿಕೆ ನೀಡಿದರು.

ಶಿಕ್ಷಣ ಉಳಿಸಿ ಹೋರಾಟ ಸಮಿತಿಯ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ಅತಿಥಿ ಉಪನ್ಯಾಸಕರ ಬದುಕು ಮೊದಲಿನಿಂದಲೂ ದುಸ್ತರವಾಗಿದೆ. ಅವರಿಗೆ ಯುಜಿಸಿ ವೇತನ ನೀಡಲಾಗದಿದ್ದರೆ, ರಾಜ್ಯ ಸರಕಾರ ಪ್ರತ್ಯೇಕ ವೇತನ ನಿಗದಿ ಮಾಡಲಿ ಎಂದು ಆಗ್ರಹಿಸಿದರು.

### ಸಿಡಿಸಿ ಸದಸ್ಯರ ಸೇವೆ ಕೊಂಡಾಡಿದ ಅತಿಥಿ ಉಪನ್ಯಾಸಕರು

**ಶುಕ್ರವಾರ ಜಿಲ್ಲಾ ಕೇಂದ್ರದಲ್ಲಿ ಪ್ರತಿಭಟನಾ ಮೆರವಣಿಗೆಯ ಕರೆಗೆ ಜಿಲ್ಲೆಯ ವಿವಿಧ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರು ಆಗಮಿಸಿದ್ದರು. ಅತಿಥಿ ಉಪನ್ಯಾಸಕರ ಸಮಸ್ಯೆ ಅರಿತ ಕೊಪ್ಪಳ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಮಂಜುನಾಥ ಗೊಂಡಬಾಳ, ಸಲೀಂ ಅಳವಂಡಿ, ಗಂಗಾಧರ, ಶ್ರೀನಿವಾಸ್ ಪಂಡಿತ್ ಮತ್ತಿತರ ಸದಸ್ಯರು ಸೇರಿ ಮಧ್ಯಾಹ್ನ ಭೋಜನದ ವ್ಯವಸ್ಥೆ ಮಾಡಿದರು. ತಾವೇ ಅಡುಗೆ ಸಿದ್ಧಪಡಿಸಿದ್ದಲ್ಲದೇ ಪ್ರತಿಭಟನಾ ಮೆರವಣಿಗೆಯಲ್ಲಿ ಬಳಲಿದ ಅತಿಥಿ ಉಪನ್ಯಾಸಕರಿಗೆ ಅಡುಗೆ ಬಡಿಸಿ ಎಲ್ಲರ ಮೆಚ್ಚುಗೆ ಗಳಿಸಿದರು.**

## ನಾವು ರೈಲ್ವೆ ಇಲಾಖೆ ಶ್ರಮಜೀವಿಗಳಣ್ಣ



ಎರಡು ಕಂಬಿಗಳ ಮೇಲೆ ರೈಲು ಬಂಡಿ ಓಡುವುದಣ್ಣ
ಚುಕು ಬುಕು ಚುಕು ಬುಕು ಸದ್ದನು ಮಾಡುವದಣ್ಣಾ
ಕಾಲ ಕಾಲಕೂ ರೈಲು ಪ್ರಯಾಣವೇ ಸುಖಕರವಣ್ಣ
ಹಗಲಿರುಳೆನ್ನದೇ ನಿಮ್ಮಯ ರಕ್ಷಣೆ ನಮ್ಮದಣ್ಣ
ನಮ್ಮ ರಕ್ಷಣೆಗೆ ನೀವೆಲ್ಲೆಣ್ಣ..!

ನಮ್ಮನ್ನು ಕರೆಯುವರು ಹಳಿಯ ಸಿಪಾಯಿಗಳಣ್ಣ
ಭಾರತೀಯ ರೈಲ್ವೆ ಇಲಾಖೆಯ ಬೆನ್ನೆಲುಬು ಅಂತಣ್ಣ
ರೈಲು ಪ್ರಯಾಣಿಕರಾದ ನಿಮಗೇಗೆ ತಿಳಿಯುತ್ತಣ್ಣ
ನಮ್ಮ ರಕ್ಷಣೆಗೆ ನೀವೆಲ್ಲೆಣ್ಣ..!

ಮಳೆಯು ಬರುವಾಗ ರಕ್ಷಣಾ ಬ್ಯಾಗ್ ಹಿಡಿದು
ಹಳಿಯನು ನೋಡುತ ಶಿಳ್ಳಿಯನೊಂದಿಗೆ
ಫಲಕವ ತೋರಿ ಕತ್ತಲೆಯಲಿ
ಡ್ರೈವರ್ ಣ್ಣನಿಗೆ ಎಚ್ಚರಿಸುವೆವು ನಾವಣ್ಣ..!

ರಾತ್ರಿಯಲ್ಲೊಬ್ಬನೆ ಕಾಡನು ಸುತ್ತಿ
ಸುರಂಗದಿ ನಡೆದು, ಸೇತುವೆ ದಾಟಿ
ನಿಮ್ಮಯ ರಕ್ಷಣೆ ಕಾಯುವೆವಣ್ಣ
ನಮ್ಮ ರಕ್ಷಣೆಗೆ ನೀವೆಲ್ಲೆಣ್ಣ...!

ಚಳಿಗಾಲದಲಿ ರೈಲು ಹಳಿಯ ಬಿರುಕನು ನೋಡಲು
ಪಹರೆಯ ಹೊರಡುವೆವು ನಾವಣ್ಣ
ಸುಡು ಬೇಸಿಗೆಯಲಿ ಕಾದ ಕಂಬಿಯ ಕಾಟವ ತಪ್ಪಲು
ಹೊರಡುವೆವು ಪಹರೆಗೆ ನಾವಣ್ಣ
ನಮ್ಮ ರಕ್ಷಣೆಗೆ ನೀವೆಲ್ಲೆಣ್ಣ...!?

ದಿನದ ಗಡಿಯಾರದ ಹಾಗೆ ದುಡಿವೆವು ನಾವಣ್ಣ
ನಿಮ್ಮಯ ಸುಖಕರ ಪ್ರಯಾಣಕ್ಕೆ
ಹಳಿ ತೊಂದರೆಗಿಡಾದಾಗ ರಕ್ಷಣೆ ಮಾಡಿ
ಬಂಡಿಯ ಸುರಕ್ಷತೆಯಿಂದ ಕಳಿಸುವೆವಣ್ಣ
ಈಗ ಹೇಳಿ ನಮ್ಮ ರಕ್ಷಣೆಗೆ ನೀವೆಲ್ಲೆಣ್ಣ..!?
ನಮ್ಮ ಕಷ್ಟ ನಿಮಗೆ ಹೇಗೆ ತಿಳಿಯುತ್ತಣ್ಣ...!

**– ಶ್ರೀವತ್ಸ ಹಂಪಾಪುರ.**
(ನಿವೃತ್ತ ಪ್ರಾಚಾರ್ಯರು DPWTC)

# ವಿದ್ಯಾರ್ಥಿಗಳಿಂದ ಬೇಡಿಕೆಗಳ ಮಹಾಪೂರ

▶▶ ಮೊದಲನೇ ಪುಟದಿಂದ

ಅಧ್ಯಕ್ಷತೆ ವಹಿಸಿದ್ದ ಗ್ರಾ.ಪಂ ಅಧ್ಯಕ್ಷ ಕೆ.ಎಸ್. ಪೂಜಾರ ಮಾತನಾಡಿ, ಮನೆಗೊಂದು ಶೌಚಾಲಯ ನಿರ್ಮಿಸಿಕೊಳ್ಳಲು ಸರಕಾರ ಸಹಾಯ ಧನ ನೀಡುತ್ತದೆ. ಆದ್ದರಿಂದ ಮಕ್ಕಳು ಸಹ ತಮ್ಮ ಪಾಲಕರಿಗೆ ಶೌಚಾಲಯ ನಿರ್ಮಿಸಿಕೊಳ್ಳಲು ಒತ್ತಾಯಿಸಬೇಕು. ಶುದ್ಧ ಕುಡಿಯುವ ನೀರು, ಶೌಚಾಲಯ, ಆಟದ ಮೈದಾನ, ಕಂಪೌಂಡ್ ನಿರ್ಮಾಣ, ಬಯಲು

ಬಹಿರ್ದೆಸೆ ತಪ್ಪಿಸುವ ಕುರಿತು ಚರ್ಚಿಸಿ ಶೀಘ್ರವಾಗಿ ಸಮಸ್ಯೆಗಳನ್ನು ಬಗೆಹರಿಸಿ, ಮಕ್ಕಳ ಕಲಿಕೆಗೆ ಉತ್ತಮ ಪರಿಸರ ನಿರ್ಮಾಣ ಮಾಡಿಕೊಡುವ ಭರವಸೆ ನೀಡಿದರು.

ತಾ.ಪಂ ಎಂ.ಜಿ.ಎನ್.ಆರ್.ಜಿಯ ಸಹಾಯಕ ನಿರ್ದೇಶಕ ಕುಮಾರ ಪೂಜಾರ ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳು ತಮ್ಮ ಹಕ್ಕುಗಳ ಜೊತೆಗೆ ಶಿಕ್ಷಣಕ್ಕೆ ಅಡ್ಡಿಯಾಗುವ ವಯಕ್ತಿಕ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸಬೇಕೆಂದರು. ಜಿಲ್ಲಾ ಮಕ್ಕಳ ಹಕ್ಕುಗಳ ಘಟಕದ ರೂಪಾ ಬೆಟಗೇರಿ ಮಕ್ಕಳ ಹಕ್ಕುಗಳ ಕಾನೂನು ಕುರಿತು ವಿವರಿಸಿದರು. ಗ್ರಾಮದ 6 ಶಾಲೆಗಳ ಮಕ್ಕಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಕಳೆದ ವರ್ಷ ಎಸ್ಎಸ್ಎಲ್‌ಸಿಯಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಾದ ನೇತ್ರಾವತಿ ಪಟ್ಟೇದ, ಸಾನಿಯಾ ಹುಬ್ಬಳ್ಳಿ, ಈರಮ್ಮ ಕರಿಯಲ್ಲಪ್ಪನವರ ಇವರಿಗೆ ಗ್ರಾ.ಪಂ ಸದಸ್ಯ ಪೀರಸಾಬ ನದಾಫ್ 10 ಸಾವಿರ ರೂ. ನಗದು ಬಹುಮಾನ ನೀಡಿದರು.

ಬಾಲಕಿಯರ ಸರಕಾರಿ ಪ್ರೌಢಶಾಲೆಯ ಶಾಲಾ ಪ್ರತಿನಿಧಿ ಸಹನಾ ನವಲಗುಂದ ಕಾರ್ಯಕ್ರಮ ಉದ್ಘಾಟಿಸಿದರು. ಆರೋಗ್ಯ ಇಲಾಖೆಯ ಡಾ. ಅಮೃತ ಹರಿದಾಸರ, ಅಂಗನವಾಡಿ ಮೇಲ್ವಿಚಾರಕಿ ಎಸ್.ಎ. ಹತ್ತಿವಾಲೆ ಸೇರಿದಂತೆ ಮುಖ್ಯೋಪಾಧ್ಯಾಯರು, ಎಸ್‌ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷರು, ಪೊಲೀಸ್ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು. ಪಿ.ಡಿ.ಓ ರಾಜಕುಮಾರ ಭಜಂತ್ರಿ ಸ್ವಾಗತಿಸಿದರು. ಎಸ್.ಎಚ್. ಶೆಟ್ಟಿನಾಯ್ಕರ ನಿರೂಪಿಸಿದರು. ಕಾರ್ಯದರ್ಶಿ ತುಕರಾಮ ಹುಲಗಣ್ಣವರ ವಂದಿಸಿದರು.

### ಏಡ್ಸ್ ಜಾಗೃತಿ ಜಾಥಾದಲ್ಲಿ ಜಿಮ್ಸ್ ನಿರ್ದೇಶಕ ಡಾ. ಬಿ.ಎಸ್. ಬೊಮ್ಮನಹಳ್ಳಿ

# ಹಲವು ರೋಗಗಳಿಗೆ ತುತ್ತಾಗುವ ಸ್ಥಿತಿಯೇ ಏಡ್ಸ್

■ ವಿಜಯಸಾಕ್ಷಿ ಸುದ್ದಿ, ಗದಗ

ಎಚ್‌ಐವಿ ಅಂದರೆ ಮನುಷ್ಯನ ರೋಗ ನಿರೋಧಕ ಶಕ್ತಿಯನ್ನು ಕಡಿಮೆ ಮಾಡುವ ವೈರಾಣು. ಈ ವೈರಾಣು ನಮ್ಮ ದೇಹದ ರೋಗ ನಿರೋಧಕ ಶಕ್ತಿಯನ್ನು ಕಡಿಮೆ ಮಾಡುತ್ತಾ ಹೋಗುತ್ತದೆ. ಹೀಗೆ ಹಲವು ರೋಗಗಳಿಗೆ ಒಳಗಾಗುವ ಸ್ಥಿತಿಯನ್ನು ಏಡ್ಸ್ ಎನ್ನುತ್ತಾರೆ ಎಂದು ಜಿಮ್ಸ್ ನಿರ್ದೇಶಕರಾದ ಡಾ. ಬಿ.ಎಸ್. ಬೊಮ್ಮನಹಳ್ಳಿ ಹೇಳಿದರು.



ನಗರದ ಜಿಲ್ಲಾಧಿಕಾರಿಗಳ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ, ಜಿಲ್ಲಾ ವಾರ್ತಾ ಮತ್ತು ಪ್ರಸಾರ ಇಲಾಖೆ, ಜಿಮ್ಸ್ ರಕ್ತ ನಿಧಿ ಕೇಂದ್ರ ಜಿಲ್ಲಾ ಆಸ್ಪತ್ರೆ, ಜಿಮ್ಸ್ ಸರಕಾರಿ ಶುಶ್ರೂಷಾ ಮಹಾವಿದ್ಯಾಲಯ, ಬಸವೇಶ್ವರ ಪ್ಯಾರಾ ಮೆಡಿಕಲ್ ಕಾಲೇಜು, ಗಾಂಧೀಜಿ ಪ್ಯಾರಾ ಮೆಡಿಕಲ್ ಕಾಲೇಜ್, ಪಾಲನಗಲಾ ನರ್ಸಿಂಗ್ ಕಾಲೇಜು, ಜಿಲ್ಲಾ ರೆಡ್ ಕ್ರಾಸ್ ಸಂಸ್ಥೆ, ಆಯ್.ಎಂ.ಎ. ರಕ್ತ ಭಂಡಾರ, ರಕ್ಷಣೆ ಜಿಲ್ಲಾ ಮಹಿಳಾ ಒಕ್ಕೂಟ, ಸೃಷ್ಟಿ ಸಂಕುಲ ಸಂಸ್ಥೆ, ಜಗದ್ಗುರು ತೋಂಟ-ದಾರ್ಯ ಮಹಾವಿದ್ಯಾಲಯ ಹಾಗೂ ರೆಡ್ ಕ್ರಾಸ್ ರಿಬ್ಬನ್ ಕ್ಲಬ್ ಗದಗ ಇವರುಗಳ ಸಂಯುಕ್ತ ಆಶ್ರಯದಲ್ಲಿ 'ವಿಶ್ವ ಏಡ್ಸ್ ಜಾಗೃತಿ ದಿನ-2023 ಹಾಗೂ ಜನಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಡಾ. ಎಸ್.ಎಸ್. ನೀಲಗುಂದ ಮಾತನಾಡಿ, ಎಚ್‌ಐವಿ ಸೋಂಕು ಶೇ. 87ಕ್ಕಿಂತಲೂ ಹೆಚ್ಚು ಸಂದರ್ಭಗಳಲ್ಲಿ ಅಸುರಕ್ಷಿತ ಲೈಂಗಿಕ ಸಂಬಂಧ (ಕಾಂಡೋಂ ರಹಿತವಾಗಿ), ಎಚ್‌ಐವಿ ಸೋಂಕಿತ ತಾಯಿಯಿಂದ ಮಗುವಿಗೆ ಗರ್ಭಾವಸ್ಥೆಯಲ್ಲಿ, ಹೆರಿಗೆ ಸಮಯದಲ್ಲಿ ಅಥವಾ ಎದೆ ಹಾಲಿನ ಮೂಲಕ, ಎಚ್‌ಐವಿ ಸೋಂಕಿತ ರಕ್ತವನ್ನು ಪರೀಕ್ಷೆ ಮಾಡದೇ ಪಡೆಯುವುದರಿಂದ, ಎಚ್‌ಐವಿ ಸೋಂಕಿತ ಸೂಜಿ, ಸಿರಿಂಜ್, ಹರಿತವಾದ ಸಲಕರಣೆಗಳನ್ನು ಸಂಸ್ಕರಿಸದೇ ಬಳಸುವುದರಿಂದ ಏಡ್ಸ್ ಹರಡುತ್ತದೆ ಎಂದರು.

ಡಿ.ಸಿ ಕಚೇರಿಯಿಂದ ಆರಂಭವಾದ ಜಾಥಾ, ಮುಳಗುಂದ ನಾಕಾ ಮುಖಾಂತರ ಬಸವೇಶ್ವರ ಸರ್ಕಲ್‌ನಿಂದ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಜಾಥಾದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಭಿತ್ತಿಪತ್ರಗಳನ್ನು ಪ್ರದರ್ಶಿಸುತ್ತ, ಘೋಷಣೆಗಳನ್ನು ಕೂಗುತ್ತ ಜನತೆಯಲ್ಲಿ ಏಡ್ಸ್ ಬಗ್ಗೆ ಜಾಗೃತಿ ಮೂಡಿಸಿದರು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಆರುಂಧತಿ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಗೀತಾ ಕಾಂಬಳೆ, ಪುಷ್ಪಾ ಪಾಟೀಲ, ಸ್ಟಿಫನ್ ಜಾನ್, ಶಿವರಾಜ ಕುಂಬಾರ, ಪದ್ಮರಾಜ, ಪ್ರದೀಪ ಕಡಿವಾಲ ಉಪಸ್ಥಿತರಿದ್ದರು. ಬಸವರಾಜ ಉಳಗಟ್ಟಿ ನಿರೂಪಿಸಿದರು. ಕೊನೆಯಲ್ಲಿ ಉಮೇಶ ಕರಮುಡಿ ವಂದನಾರ್ಪಣೆಗೈದರು.

# ಸಾಮಾಜಿಕ ಸಾಮರಸ್ಯ ಸಾರಿದ ಸಂತ ಕನಕದಾಸರು



■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಗಂಗಿಮಡಿ ರಸ್ತೆಯಲ್ಲಿರುವ ಹಿದಾಯತ್ ಜೆ.ಯು. ಹಿರಿಯ ಪ್ರಾರ್ಥಮಿಕ ಶಾಲೆಯಲ್ಲಿ ಭಕ್ತ ಕನಕದಾಸರ ಜಯಂತಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಜುನೇದ ಎಚ್ ಉಮಚಗಿ ಮಾತನಾಡಿ, ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆ ಏನಾದರೂ ಬಲ್ಲಿರಾ? ಎಂದು ಸಮಾಜದಲ್ಲಿರುವ ವರ್ಗಗಳ ತಾರತಮ್ಯದ ವಿರುದ್ಧ ಧ್ವನಿ ಎತ್ತಿದ ಮಹಾನ್ ಸಂತ ಕನಕದಾಸರು ಎಂದರು.ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯೆ ಪಿ.ಬಿ. ಗುದಗಿ ಶಿಕ್ಷಕ ವೃಂದದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಏಡ್ಸ್ ತಡೆಗಟ್ಟಲು ಸಮುದಾಯದ ಸಹಭಾಗಿತ್ವ ಅವಶ್ಯಕ

▶▶ ಮೊದಲನೇ ಪುಟದಿಂದ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಮಾತನಾಡಿ, ಯುವಕರು, ಕಾಲೇಜು ವಿದ್ಯಾರ್ಥಿಗಳು, ಗ್ರಾಮೀಣ ಜನತೆಗೆ ತಿಳುವಳಿಕೆ ಮೂಡಿಸಿ, ಹೆಚ್‌ಐವಿ ಮುಕ್ತ ಸಮಾಜ ನಿರ್ಮಾಣ ಮಾಡಲು ಕೈಜೋಡಿಸಬೇಕು. ಸಮಾಜದಲ್ಲಿ ಹೆಚ್‌ಐವಿ ಸೋಂಕಿತರಿಗೆ ಮತ್ತು ಬಾಧಿತರರಿಗೆ ಆಗುವ ಅಸಮಾನತೆಯನ್ನು ತೊಲಗಿಸಲು ಮುಂದಾಗಬೇಕು. ಹೆಚ್.ಐ.ವಿ. ಏಡ್ಸ್ ಮಸೂದೆ-2017ರಂತೆ ಸೋಂಕಿತರಿಗೆ, ಭಾಧಿತರಿಗೆ ತಾರತಮ್ಯ ಮಾಡಿದರೆ ಅಂತಹವರಿಗೆ ಶಿಕ್ಷೆಯಾಗಿ ಒಂದು ಲಕ್ಷದವರೆಗೆ ದಂಡವನ್ನು ಹಾಗೂ ಎರಡು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದಾಗಿದೆ ಎಂದರು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಅರುಂಧತಿ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿ, ಹೆಚ್.ಐ.ವಿ. ಸೋಂಕಿನ ಪ್ರಮಾಣದಲ್ಲಿ ಗಣನೀಯವಾಗಿ ಇಳಿಕೆ ಕಂಡುಬಂದಿದೆ. ಇದಕ್ಕೆ ಇಲಾಖೆಯ ಹಲವಾರು ತಿಳುವಳಿಕೆ ಕಾರ್ಯಕ್ರಮಗಳು ಹಾಗೂ ಜಾಗೃತಿ ಜಾಥಾಗಳು ಕಾರಣ. ಹೆಚ್.ಐ.ವಿ. ಮತ್ತು ಏಡ್ಸ್‌ಗೆ ಬಹಳಷ್ಟು ಅಂತರವಿದ್ದು, ಹೆಚ್.ಐ.ಐ.ವಿ ಸೋಂಕಿತರು ಭಯಪಡುವ ಅಗತ್ಯವಿಲ್ಲ. ಆಪ್ತಸಮಾಲೋಚಕರಿಂದ ನೈತಿಕ ಬೆಂಬಲ ಮಾನಸಿಕ ಬೆಂಬಲವನ್ನು ಪಡೆದು ಇತರರಂತೆ ಸಾಮಾನ್ಯ ಜೀವನ ನಡೆಸಬಹುದು ಎಂದು ಹೇಳಿದರು.

ಭಾರತದಲ್ಲಿ 1986ರಲ್ಲಿ ಮೊದಲ ಪ್ರಕರಣ ಕಂಡುಬಂದಿದ್ದು, 1987ರಲ್ಲಿ ಕರ್ನಾಟಕದ ಸವದತ್ತಿ ತಾಲೂಕಿನ ಉಗರಗೋಳ ಗ್ರಾಮದಲ್ಲಿ ಕಂಡುಬಂದಿದೆ. ಜಿಲ್ಲೆಯ ಹೆಚ್.ಐ.ವಿ ಏಡ್ಸ್ ನಿಯಂತ್ರಣ ಕಾರ್ಯಕ್ರಮದಲ್ಲಿ ಎಲ್ಲ ಸಿಬ್ಬಂದಿಗಳು, ಆರೋಗ್ಯ ಇಲಾಖೆಯ ಎಲ್ಲ ಸಿಬ್ಬಂದಿಗಳು, ಸಂಘ-ಸಂಸ್ಥೆಗಳು, ಇಲಾಖೆಗಳ ಸಹಕಾರದಿಂದ ಈ ಸೋಂಕನ್ನು ಕಡಿಮೆ ಮಾಡಲು ಸಾಧ್ಯವಾಗಿದೆ ಎಂದರು.

ಪ್ರಾಚಾರ್ಯ ಪ್ರೋ. ಕೌಲಗಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಬಿ.ಸಿ. ಕರಿಗೌಡರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಎಸ್. ನೀಲಗುಂದ, ತಾಲೂಕಾ ಆರೋಗ್ಯಾಧಿಕಾರಿ ಡಾ. ಪ್ರೀತ್ ಖೋನಾ, ಡಾ. ಮಹ್ಮದ್ ಅಶ್ರಫ್ ಉಲ್, ಆರೋಗ್ಯ ಇಲಾಖೆ ಸಿಬ್ಬಂದಿಗಳು, ಕಾಲೇಜಿನ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪವಿತ್ರಾ ಪಾಟೀಲ ಪ್ರಾರ್ಥಿಸಿದರು, ಬಸವರಾಜ ಲಾಳಗಟ್ಟಿ ಸ್ವಾಗತಿಸಿದರು.

### ಹುಲಕೋಟಿಯ ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದಿಂದ ಮಾಹಿತಿ

# ಮಾವು ಬೆಳೆಗಾರರಿಗೆ ಸಲಹೆಗಳು

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ಮಾವಿನ ತೋಟಗಳಲ್ಲಿ ಎಲೆ ಚಿಗುರು ಹಾಗೂ ಹೂವಿನ ತೆನೆಗಳು ಹೊರ ಹೊಮ್ಮುತ್ತಿವೆ. ಈ ಹಂತದಲ್ಲಿ ಚಿಗುರು ಎಲೆ, ಹೂ ತೆನೆ, ಹೂ ಮೊಗ್ಗು, ಅರಳಿದ ಹೂ ತೆನೆ ಮತ್ತು ಕಟ್ಟಿದ ಎಳೆಯ ಕಾಯಿಗಳನ್ನು ಅನೇಕ ಕೀಟ ರೋಗಗಳಿಂದ ರಕ್ಷಿಸುವುದು ಅತ್ಯವಶ್ಯವಾಗಿದೆ. ಈ ಹಿನ್ನೆಲೆಯಲ್ಲಿ, ಹುಲಕೋಟಿಯ ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರವು ಮಾವು ಬೆಳೆಗಾರರಿಗಾಗಿ ಸಲಹೆಗಳನ್ನು ನೀಡಿದೆ.

ಎಲೆ ಚಿಗುರುವ ಹಂತದಲ್ಲಿ ಎಲೆ ತಿನ್ನುವ ಕೀಟಗಳಾದ ಗೂಡುಮಾರಿ ಹುಳು, ಕುಡಿಕೊರಕ, ಗೊಂಡೆ ಹುಳು ಮುಂತಾದವುಗಳು ಬಾಧಿಸುತ್ತವೆ ಹಾಗೂ ಹೂ ಬಿಡುವ ಸಮಯದಲ್ಲಿ ಈ ಕೀಟಗಳ ತೀವ್ರತೆ ಹೆಚ್ಚಾಗುತ್ತದೆ. ಈ ಸಮಸ್ಯೆಯಿಂದ ರಕ್ಷಣೆ ಪಡೆಯಲು ಪ್ರತಿ ಲೀಟರ್ ನೀರಿಗೆ 1 ಮಿ.ಲೀ. ಅಜಾಡಿರೆಕ್ಟಿನ್ 10,000 ಪಿ.ಪಿ.ಎಂ. ಅಥವಾ 5 ಮಿ.ಲೀ. ಅಜಾಡಿರೆಕ್ಟಿನ್ 3000 ಪಿ.ಪಿ.ಎಂ. ಅಥವಾ 2.5 ಮಿ.ಲೀ ಕ್ಲೋರೊಪೈರಿಫಾಸ್ 20% ಇ.ಸಿ. ಅಥವಾ 1 ಮಿ.ಲೀ. ಇಂಡೋಕ್ಸಿಕಾರ್ಬ ಕೀಟನಾಶಕಗಳನ್ನು 10ರಿಂದ 15 ದಿನಗಳ ಅಂತರದಲ್ಲಿ ಕೀಟಗಳ ತೀವ್ರತೆಗನುಗುಣವಾಗಿ ಸಿಂಪಡಿಸಬೇಕು. ಇವುಗಳೊಂದಿಗೆ ಪೊಟ್ಯಾಶಿಯಂ ನೈಟ್ರೇಟ್ (13:0:45) ನೀರಿನಲ್ಲಿಕರಗುವ ಸಂಯುಕ್ತ ಗೊಬ್ಬರವನ್ನು ಪ್ರತಿ ಲೀಟರ್ ನೀರಿಗೆ 20 ಗ್ರಾಂ.ನಂತೆ ಬೆರೆಸಿ ಎಲೆಗಳಿಗೆ ಸಿಂಪಡಿಸಬೇಕು. ಹೂವು ಬಿಟ್ಟಿರುವ ಗಿಡಗಳಿಗೆ ಯಾವುದೇ ಕಾರಣಕ್ಕೂ ನೀರು ಕೊಡಬಾರದು.

ತೆನೆಕೊರಕ, ಥ್ರಿಪ್ಸ್ ನುಶಿ, ಬೂದಿ ರೋಗ, ಕಾಡಿಗೆ ರೋಗ, ಒಣಗು ರೋಗಗಳ ಹತೋಟಿಗಾಗಿ ಹೂವು ಬಿಡುವುದಕ್ಕಿಂತ ಮುಂಚೆ ಹಾಗೂ ಕಾಯಿ ಕಟ್ಟಿದ ಕೂಡಲೇ ಗಿಡಗಳಿಗೆ ಪ್ರತಿ ಲೀಟರ್ ನೀರಿಗೆ 5 ಮಿ.ಲೀ. ಬೇವಿನ ಮೂಲದ ಕೀಟನಾಶಕ 3000 ಪಿ.ಪಿ.ಎಂ. ಅಥವಾ 5 ಗ್ರಾಂ ಲೆಕಾನಿಸಿಲಿಯಂ ಲೆಕಾನಿ ಅಥವಾ 3 ಗ್ರಾಂ ಬೆವೆರಿಯಾ ಬೆಸ್ಸಿಯಾನಾ ಅಥವಾ 3 ಗ್ರಾಂ ಮೆಟರೈಝಿಯಂ ಅನಿಸೋಪ್ಲಿಯೆ ಜೈವಿಕ ಶಿಲೀಂದ್ರ ಕೀಟನಾಶಕಗಳನ್ನು ಬೆರಸಿ ಸಿಂಪಡಿಸಬಹುದು. ರಾಸಾಯನಿಕ ಪದ್ಧತಿಯಲ್ಲಿ 0.25 ಗ್ರಾಂ ಥೈಯೋಮಿಥಾಕ್ಸಾಮ್ 25 ಡಬ್ಲ್ಯೂ.ಜಿ. ಅಥವಾ 0.25 ಮಿ.ಲೀ ಇಮಿಡಾಕ್ಲೊಪ್ರಿಡ್ 17.8 ಎಸ್. ಎಲ್. ಅಥವಾ 0.5 ಮಿ.ಲೀ ಲ್ಯಾಂಬ್ಡಾಸೈಲೋತ್ರಿನ್ 5 ಇ.ಸಿ. ಕೀಟನಾಶಕಗಳೊಂದಿಗೆ 1 ಗ್ರಾಂ ಟ್ರೈಡಿಮೆಫಾನ್ 25 ಡಿ.ಪಿ ಅಥವಾ 1 ಗ್ರಾಂ ಕಾರ್ಬೆನ್‌ಡೈಜಿಮ್ 50 ಡಬ್ಲ್ಯೂ.ಪಿ ಅಥವಾ 1 ಮಿ.ಲೀ ಹೆಕ್ಸಾಕೊನೊಜೋಲ್ 5 ಇ.ಸಿ. ಶಿಲೀಂಧ್ರನಾಶಕಗಳನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬಹುದಾಗಿದ್ದು, ಈ ಯಾವುದೇ ರಾಸಾಯನಿಕಗಳನ್ನು ಒಂದು ಅಥವಾ ಎರಡಕ್ಕಿಂತ ಹೆಚ್ಚು ಬಾರಿ ಸಿಂಪಡಿಸಬಾರದು.



ಕಟ್ಟಿದ ಕಾಯಿಗಳು ಉದುರುವುದನ್ನು ನಿಯಂತ್ರಿಸಲು ಪ್ರತಿ ಲೀ. ನೀರಿಗೆ 0.5 ಮಿ.ಲೀ ಎನ್.ಎ.ಎ (ಪ್ಲಾನೋಫಿಕ್ಸ್) ಸಸ್ಯ ಬೆಳವಣಿಗೆ ಚೋದಕವನ್ನು ಬೆರೆಸಿ ಸಿಂಪಡಿಸಬೇಕು. ಕಾಯಿಗಳು ಬಟಾಣಿಯಿಂದ ಗೋಲಿ ಗಾತ್ರದಲ್ಲಿರುವಾಗ ನೀರು ಕೊಡಲು ಪ್ರಾರಂಭಿಸಿ, ಕಾಯಿಗಳ ಬೆಳವಣಿಗೆ ಹಂತದಲ್ಲಿ ಎರಡರಿಂದ ಮೂರು ನೀರಾವರಿ ಕೊಡುವುದರಿಂದ ಕಾಯಿಗಳ ಗಾತ್ರ ಹೆಚ್ಚುತ್ತದೆ. ಕಾಯಿಗಳು ಗೋಲಿ ಗಾತ್ರದ ಹಂತದಲ್ಲಿದ್ದಾಗ ಮತ್ತು ಮಿಡಿ ಕಾಯಿಗಳು ಬೆಳೆಯುವ ಹಂತದಲ್ಲಿ ಪ್ರತಿ 15 ಲೀಟರ್ ನೀರಿಗೆ 75 ಗ್ರಾಂ. ಲಘು ಪೋಷಕಾಂಶಗಳ ಮಿಶ್ರಣವಾದ ಅರ್ಕಾ ಮಾವು ಸ್ಪೆಷಲ್, ಎರಡು ನಿಂಬೆ ಹಣ್ಣಿನ ರಸ ಮತ್ತು ಶಾಂಪೂಗಳೊಂದಿಗೆ ಬೆರೆಸಿ ಸಿಂಪಡಿಸಬೇಕು. ಇದರಿಂದ ಶೇ.15ರಷ್ಟು ಹೆಚ್ಚು ಇಳುವರಿಯನ್ನು ಪಡೆಯಬಹುದು.

ಹಣ್ಣು ನೊಣದ ಬಾಧೆ ನಿಯಂತ್ರಣಕ್ಕಾಗಿ ಪ್ರತಿ ಎಕರೆಗೆ 6ರಿಂದ 8 ಮೋಹಕ ಬಲೆಗಳನ್ನು ಹಾಕಬೇಕು. ಇದರಲ್ಲಿರುವ ಮೋಹಕವನ್ನು 20 ದಿನಗಳಿಗೊಮ್ಮೆ ಬದಲಿಸಬೇಕು ಮತ್ತು ಮೋಹಕ ವಸ್ತುವಿನ ಮರದ ತುಂಡಿನ ಮೇಲೆ 5 ಹನಿ ಡೈಕ್ಲೋರೋವಾಸ್ ಅಥವಾ ಮೆಲಾಥಿಯಾನ್ ನೆನೆಸಿ ಬಲೆಗಳನ್ನು ಹಾಕಬೇಕು. ಇದರಿಂದ ಹಣ್ಣು ನೊಣದ ಬಾಧೆಯನ್ನು ಗಣನೀಯವಾಗಿ ಕಡಿಮೆ ಮಾಡಬಹುದು.

ಅರ್ಕಾ ಮಾವು ಸ್ಪೆಷಲ್ (ಲಘು ಪೋಷಕಾಂಶಗಳ ಮಿಶ್ರಣ) ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿಯಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿಯನ್ನು ಸಂಪರ್ಕಿಸಬಹುದಾಗಿದೆ.

# ಕಲ್ಲಂಗಡಿ ಬೆಳೆ ಕ್ಷೇತ್ರೋತ್ಸವ ಮುಂದೂಡಿಕೆ

■ ವಿಜಯಸಾಕ್ಷಿ ಸುದ್ದಿ, ಗದಗ

2023-24 ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಿಂದ ಕಲ್ಲಂಗಡಿ ಹಣ್ಣಿನ ಬೆಳೆ ಕ್ಷೇತ್ರೋತ್ಸವ ಕಾರ್ಯಕ್ರಮವನ್ನು ಡಿಸೆಂಬರ್ 2ರಂದು ನಿಗದಿಪಡಿಸಲಾಗಿತ್ತು. ಕಾರಣಾಂತರಗಳಿಂದ ಸದರಿ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದು ಶಿರಹಟ್ಟಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸನ್ಮಾರ್ಗ ಕಾಲೇಜು ವಿದ್ಯಾರ್ಥಿಗಳು ವಿಭಾಗ ಮಟ್ಟಕ್ಕೆ ಆಯ್ಕೆ



■ ವಿಜಯಸಾಕ್ಷಿ ಸುದ್ದಿ, ಗದಗ

ಪದವಿಪೂರ್ವ ಶಿಕ್ಷಣ ಇಲಾಖೆ ಗದಗ ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜು ನರಗುಂದ ಇವುಗಳ ಸಂಯುಕ್ತಾಶ್ರಯದಲ್ಲಿ ಜರುಗಿದ 2023-24ನೇ ಶೈಕ್ಷಣಿಕ ಸಾಲಿನ ಪದವಿಪೂರ್ವ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಇಲ್ಲಿನ ಸನ್ಮಾರ್ಗ ಪ.ಪೂ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸಾಧನೆಗೈದಿದ್ದಾರೆ.

ದ್ವಿತೀಯ ಪಿಯುಸಿ ವಿಭಾಗದಲ್ಲಿ ಪಿ. ಪಾರ್ವತಿ ಚರ್ಚಾ ಸ್ಪರ್ಧೆಯಲ್ಲಿ ಪ್ರಥಮ, ಪ್ರಮೀಳಾ ಚಿಕ್ಕನಗೌಡ್ರ ಭಾವಗೀತೆಯಲ್ಲಿ ಪ್ರಥಮ, ಪ್ರಥಮ ಪಿಯುಸಿ ವಿಭಾಗದಲ್ಲಿ ಪ್ರಿಯಾ ಕಾಟಿಗರ ಇಂಗ್ಲೀಷ್ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಸೃಷ್ಟಿ ನೀಲಗುಂದ ದ್ವಿತೀಯ ಪಿಯುಸಿ ವಿಭಾಗದ ಭಕ್ತಿಗೀತೆ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಗಳಿಸಿ ತಮ್ಮ ಪ್ರತಿಭೆ ಮೆರೆದಿದ್ದಾರೆ.

ಸಾಧಕ ವಿದ್ಯಾರ್ಥಿಗಳಿಗೆ ಸಂಸ್ಥೆಯ ಚೇರಮನ್ ಪ್ರೊ. ರಾಜೇಶ ಕುಲಕರ್ಣಿ, ಪ್ರಾಚಾರ್ಯ ಪ್ರೊ. ಪ್ರೇಮಾನಂದ ರೋಣದ, ಆಡಳಿತ ಮಂಡಳಿಯ ಪ್ರೊ. ರೋಹಿತ್ ಒಡೆಯರ್, ಪ್ರೊ. ಉಡುಪಿ ದೇಶಪಾಂಡೆ, ಪ್ರೊ. ರಾಹುಲ್ ಒಡೆಯರ್, ಪ್ರೊ. ಸೈಯದ್ ಮತೀನ್ ಮುಲ್ಲಾ, ಆಡಳಿತಾಧಿಕಾರಿ ಪ್ರೊ. ಎಮ್.ಸಿ. ಹಿರೇಮಠ, ಉಪನ್ಯಾಸಕರ ಬಳಗ ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# ಗ್ರಾಹಕರು ಕೆವಿಜಿ ಬ್ಯಾಂಕ್ ನೆರವು ಪಡೆಯಿರಿ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಕೆವಿಜಿ ಬ್ಯಾಂಕ್ ಗ್ರಾಹಕರ ಆರ್ಥಿಕ ಅಭಿವೃದ್ಧಿ ಹೊಂದಲು ತುಂಬಾ ಸಹಕಾರಿಯಾಗಿದೆ ಎಂದು ಗದಗ ಕೆವಿಜಿ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕ ಪ್ರಕಾಶ ಎ. ಹೇಳಿದರು.


ಸಮೀಪದ ಸೊರಟೂರ ಗ್ರಾಮದ ಕೆವಿಜಿ ಬ್ಯಾಂಕ್ ಕಾರ್ಯಾಲಯದಲ್ಲಿ ಔಟ್ ರೀಟ್ ಹಾಗೂ ಆರ್ಥಿಕ ಶಿಕ್ಷಣ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿ, ಗ್ರಾಮೀಣ ಭಾಗದ ಜನರು ಆರ್ಥಿಕವಾಗಿ ಸದೃಢರಾಗಲೆಂದೇ ಗ್ರಾಮೀಣ ವಿಕಾಸ ಬ್ಯಾಂಕ್ ಗ್ರಾಮೀಣ ಭಾಗದಲ್ಲಿ ಹೆಚ್ಚು ಹೆಚ್ಚು ಶಾಖೆಗಳನ್ನು ತೆರೆಯುವ ಮೂಲಕ ಗ್ರಾಮೀಣ ಭಾಗದ ಜನರು ಆರ್ಥಿಕವಾಗಿ ಸದೃಢರನ್ನಾಗಿಸಲು ಕಂಕಣಬದ್ಧವಾಗಿದೆ.




ಸಾಲ ಸೌಲಭ್ಯಗಳನ್ನು ಪಡೆದುಕೊಂಡು ಆರ್ಥಿಕವಾಗಿ ಸದೃಢರಾಗುವುದರೊಂದಿಗೆ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಉತ್ತಮ ಪ್ರಜೆಗಳನ್ನಾಗಿ ರೂಪಿಸಬೇಕಾಗಿದೆ ಎಂದರು.

ಗದಗ ಕೆವಿಜಿ ಆರ್.ಓ, ಶಿವಕುಮಾರ.ಪಿ, ಗ್ರಾ.ಪಂ ಅಧ್ಯಕ್ಷೆ ಜಯಶ್ರೀ ಬಂಕಾಪೂರ, ಪಣಿಬಾಬು ಎನ್, ರವಿ, ಪರಶುರಾಮ ಹುಗಾರ, ಎಂ.ಎಫ್. ಬಾಬುಖಾನವರ, ಟಿ.ಆರ್. ಕಣವಿ, ಕರಿಯಣ್ಣ, ಹೊನ್ನೂರಸ್ವಾಮಿ.ಜಿ, ಕಲ್ಲೂರಿ ಶಿರಿಕಾ, ಕೃಷ್ಣಾ ಅಂಬೊರಿ ಇದ್ದರು.

# ಡಯಾಲಿಸಿಸ್ ಸಿಬ್ಬಂದಿಗಳ ಸಮಸ್ಯೆ ಬಗೆಹರಿಸಿ



■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಡಯಾಲಿಸಿಸ್ ಸಿಬ್ಬಂದಿಗಳು ವೇತನ ಸಿಗದ ಕಾರಣಕ್ಕೆ ಮುಷ್ಕರ ನಡೆಸಲು ಮುಂದಾಗಿದ್ದಾರೆ. ಮುಷ್ಕರದಿಂದ ಲಕ್ಷಾಂತರ ರೋಗಿಗಳು ಜೀವನ್ಮರಣ ಸ್ಥಿತಿ ಎದುರಿಸಬೇಕಾಗುತ್ತದೆ. ರೋಗಿಗಳ ಸಂಕಷ್ಟ ಅರಿತು ತಕ್ಷಣ ಡಯಾಲಿಸಿಸ್ ಸಿಬ್ಬಂದಿಗಳ ವೇತನ ನೀಡಲು ಸರಕಾರ ಮುಂದಾಗಬೇಕು. ಇಲ್ಲದಿದ್ದಲ್ಲಿ ಮುಷ್ಕರ ನಿರತ ಡಯಾಲಿಸಿಸ್ ಸಿಬ್ಬಂದಿಗಳ ಜೊತೆ ಸೇರಿ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾ ಕರ್ನಾಟಕ ರಾಜ್ಯಾಧ್ಯಕ್ಷ, ಅಡ್ವಕೇಟ್ ತಾಹೇರ್ ಹುಸೇನ್ ಸರಕಾರಕ್ಕೆ ತೀವ್ರ ಎಚ್ಚರಿಕೆ ನೀಡಿದ್ದಾರೆ.

ನವೆಂಬರ್ 30ರಿಂದ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಲು ಈ ನೌಕರರು ನಿರ್ಧರಿಸಿದ್ದಾರೆ. ಕಳೆದ ಎರಡೂವರೆ ವರ್ಷಗಳಿಂದ ಸಿಬ್ಬಂದಿ ಅರ್ಧ ಸಂಬಳಕ್ಕೆ ದುಡಿಯುತ್ತಿದ್ದಾರೆ. ಎರಡೂವರೆ ತಿಂಗಳ ವೇತನ ಕೂಡ ತಡೆದಿದ್ದು, ಅರ್ಧ ಸಂಬಳ ಕೂಡ ಸಿಗದೆ ಸಿಬ್ಬಂದಿಗಳು ಪರದಾಡುತ್ತಿದ್ದಾರೆ. ಈ ಹಿಂದೆ 45 ಕೇಂದ್ರಗಳ ಜವಾಬ್ದಾರಿ ಹೊತ್ತಿದ್ದ ESKAG ಸಂಜೀವಿನಿಗೆ ಈಗ 202 ಕೇಂದ್ರಗಳ ಜವಾಬ್ದಾರಿಯನ್ನು ನೀಡಲಾಗಿದೆ. ಈ ಡಯಾಲಿಸಿಸ್ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 650 ಸಿಬ್ಬಂದಿಗಳ ಸಂಬಳದ ಬಗ್ಗೆ ಸರ್ಕಾರ ತೀರಾ ಅಸಡ್ಡೆ ತೋರಿದೆ. ಆದ್ದರಿಂದ ಸರಕಾರ ರೋಗಿಗಳ ಬದುಕಿನ ಜೊತೆ ಚೆಲ್ಲಾಟವಾಡದೆ ಈ ಬಗ್ಗೆ ಮುತುವರ್ಜಿಯಿಂದ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಬೇಕು ಎಂದು ಅವರು ಸರಕಾರವನ್ನು ಒತ್ತಾಯಿಸಿದ್ದಾರೆ.

## ಅಧಿಕಾರಿಗಳಿಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಸೂಚನೆ

# ಸಾರ್ವಜನಿಕರ ಬೇಡಿಕೆಗಳಿಗೆ ತಕ್ಷಣ ಸ್ಪಂದಿಸಿ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಸಮರ್ಥ, ಸಮರ್ಪಕ ಆಡಳಿತ ನಿರ್ವಹಣೆ ಮಾಡಿದರೆ ಸಾಕಷ್ಟು ಸಮಸ್ಯೆಗಳು ಸ್ಥಳದಲ್ಲಿಯೇ ಪರಿಹಾರವಾಗುತ್ತವೆ. ಸಾರ್ವಜನಿಕರ ಬೇಡಿಕೆ, ಮನವಿಗಳಿಗೆ ಕಾನೂನಾತ್ಮಕವಾಗಿ ಸ್ಪಂದಿಸಿ, ತಕ್ಷಣ ಕ್ರಮವಹಿಸುವ ಮೂಲಕ ಆಡಳಿತದಲ್ಲಿ ಧಾರವಾಡ ಜಿಲ್ಲೆಯು ಇತರ ಜಿಲ್ಲೆಗಳಿಗೆ ಮಾದರಿ ಆಗುವಂತೆ ಮಾಡಬೇಕೆಂದು ಕರ್ನಾಟಕ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಹೇಳಿದರು.

ಅವರು ಶುಕ್ರವಾರ ಬೆಳಿಗ್ಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ಜರುಗಿಸಿ, ಮಾತನಾಡಿದರು.

ಕಚೇರಿಗೆ ಬರುವ ಸಾರ್ವಜನಿಕರಿಗೆ ಸಹನೆಯಿಂದ ಉತ್ತರಿಸಿ ಮತ್ತು ಸರಿಯಾದ ಮಾಹಿತಿ ನೀಡುವ ಮೂಲಕ ಆಡಳಿತದಲ್ಲಿ ಜನರ ವಿಶ್ವಾಸ ಗಳಿಸಬೇಕು. ಕಡತ ವಿಲೇವಾರಿಯಲ್ಲಿ ಅನಗತ್ಯ ವಿಳಂಬ ಮಾಡಿದರೆ, ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲಾಗುವುದು. ಸರಕಾರಿ ಕಚೇರಿಗಳನ್ನು ಇಲಾಖಾ ಅಥವಾ ಜಿಲ್ಲಾ ಮುಖ್ಯಸ್ಥರು ಸಶಕ್ತವಾಗಿ ನಿಭಾಯಿಸಬೇಕು. ಇತರರಿಗೆ ಮಾದರಿ ಆಗುವಂತೆ ಇಲಾಖೆಗಳನ್ನು ನಿರ್ವಹಣೆ ಮಾಡಬೇಕು ಎಂದು ತಿಳಿಸಿದರು.

ಅಣ್ಣಿಗೇರಿ ಅವ್ಯವಸ್ಥೆಯ ಬಗ್ಗೆ ತಮ್ಮ ಈ ಹಿಂದಿನ ಭೇಟಿ ವೇಳೆ ಕಳವಳ ವ್ಯಕ್ತಪಡಿಸಿದ್ದ ಲೋಕಾಯುಕ್ತರು, ಆಸ್ಪತ್ರೆ ಆವರಣ ಸ್ವಚ್ಛಗೊಂಡಿರುವ ಬಗ್ಗೆ ಹಾಗೂ 250 ಸಸಿಗಳನ್ನು ನೆಟ್ಟಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಆಸ್ಪತ್ರೆ ಪಕ್ಕದಲ್ಲಿ ಗುಡಿಸಿಲಲ್ಲಿ ವಾಸಿಸುತ್ತಿರುವವರಿಗೆ ಬಯಲು ಶೌಚಾಲಯ ತಡೆಗೆ ಕ್ರಮ ವಹಿಸುವಂತೆ ಸೂಚಿಸಿದರು.



ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಉಪ ನಿರ್ದೇಶಕ ಮೋಹನ ಶಿವಣ್ಣನವರ ಅವರಿಂದ ಜಿಲ್ಲೆಯ ಎಲ್ಲ 1206 ಕೆರೆಗಳ ಸರ್ವೆ ಮಾಡಿರುವ ಕುರಿತು ಮಾಹಿತಿ ಪಡೆದರು. ಕೆರೆಗಳ ಸರ್ವೆ ಮತ್ತು ಒತ್ತುವರಿ ತೆರವು ಕಾರ್ಯ ತಿಳಿದ ಲೋಕಾಯುಕ್ತ ನ್ಯಾಯಮೂರ್ತಿಗಳು ಶ್ಲಾಘಿಸಿ, ಭೂದಾಖಲೆಗಳ ಇಲಾಖೆ ಅಧಿಕಾರಿಯನ್ನು ಅಭಿನಂದಿಸಿದರು.

ಸಭೆಯಲ್ಲಿ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಮಹಾನಗರಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರ, ನೀರಾವರಿ, ಅಬಕಾರಿ, ಪೊಲೀಸ್ ಇಲಾಖೆಗಳ ಕೆಲವು ದೂರು ಪ್ರಕರಣಗಳನ್ನು ಉಲ್ಲೇಖಿಸಿ ಮಾಹಿತಿ ಪಡೆದು, ಈ ಕುರಿತು ಸಮಗ್ರ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯ ನಂತರ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಜಿಲ್ಲೆಯ ವಿವಿಧ ಊರುಗಳಿಂದ ಆಗಮಿಸಿದ್ದ ಸಾರ್ವಜನಿಕರು, ಸಂಘ-ಸಂಸ್ಥೆಗಳಿಂದ ದೂರುಗಳನ್ನು ಸ್ವೀಕರಿಸಿದರು. ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಮಹಾನಗರ ಪೊಲೀಸ್ ಆಯುಕ್ತರಾದ ರೇಣುಕಾ ಸುಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಗೋಪಾಲ ಬ್ಯಾಕೋಡ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೋನಲ್ ವೃಷ್ಣಿ, ಲೋಕಾಯುಕ್ತ ಕಾರ್ಯದರ್ಶಿ ಶ್ರೀನಿವಾಸ, ಧಾರವಾಡ ಲೋಕಾಯುಕ್ತ ಎಸ್.ಪಿ. ಸತೀಶ ಚಿಟಗುಪ್ಪಿ ವೇದಿಕೆಯಲ್ಲಿದ್ದರು.

ಸರ್ವೆ ಮಾಡಿರುವ 1206 ಕೆರೆಗಳಲ್ಲಿ, 156 ಕೆರೆಗಳಲ್ಲಿನ 283.38 ಎಕರೆ ಒತ್ತುವರಿ ಭೂಮಿ ಗುರುತಿಸಲಾಗಿದೆ. ಈ ಪೈಕಿ 84 ಕೆರೆಗಳ 115.21 ಎಕರೆ ಭೂಮಿ ಒತ್ತುವರಿ ತೆರವುಗೊಳಿಸಲಾಗಿದೆ. ಇಲ್ಲಿಯವರೆಗೆ 1050 ಕೆರೆಗಳು ಒತ್ತುವರಿ ಮುಕ್ತವಾಗಿವೆ. ಮತ್ತು ಇನ್ನು 72 ಕೆರೆಗಳ ಸುಮಾರು 168 ಎಕರೆ ಭೂಮಿ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದರಲ್ಲಿ ಸರಕಾರಿ ಕಟ್ಟಡ, ದೇವಸ್ಥಾನ, ಸಮುದಾಯಭವನ ಹಾಗೂ ಶಾಲಾ ಕಟ್ಟಡಗಳಿದ್ದು ಪರಿಶೀಲಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದರು.

# ಸೋಮೇಶ ಹಿರೇಮಠ ಪ್ರತಿಷ್ಠಾನದ ಕಾರ್ಯ ಶ್ಲಾಘನೀಯ



■ವಿಜಯಸಾಕ್ಷಿ ಸುದ್ದಿ, ಗದಗ

ನಗರಕ್ಕೆ ಕೊಪ್ಪಳ ಗವಿಸಿದ್ಧೇಶ್ವರ ಸಂಸ್ಥಾನಮಠದ ಅಭಿನವ ಗವಿಸಿದ್ಧೇಶ್ವರ ಮಹಾ ಸ್ವಾಮೀಜಿಯವರು ದಯಮಾಡಿಸಿ, 10 ದಿನಗಳ ಪರ್ಯಂತ ಭಕ್ತ ಜನತೆಗೆ ಐತಿಹಾಸಿಕ, ಅವಿಸ್ಮರಣೀಯ ಆಧ್ಯಾತ್ಮ ಪ್ರವಚನದ ಮೂಲಕ ಜ್ಞಾನದ ಬುತ್ತಿ ಉಣಬಡಿಸಿ, ಸದ್ಭಾವನಾ ಪಾದಯಾತ್ರೆ ಮೂಲಕ ಸಾಮರಸ್ಯದ ಸಂದೇಶ ನೀಡಿರುವುದು ಸ್ಮರಣಾರ್ಹವಾಗಿದೆ ಎಂದು ಜಗದ್ಗುರು ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ನಾಗಾವಿ ಗ್ರಾಮದ ಸೋಮೇಶ ಹಿರೇಮಠ ಸೇವಾ ಪ್ರತಿಷ್ಠಾನದಿಂದ ಗದುಗಿನ ಲಕ್ಷ್ಮಣಸಾ ನಗರದಲ್ಲಿ ಹಮ್ಮಿಕೊಂಡಿದ್ದ ವಿಶೇಷ ಕಾರ್ಯಕ್ರಮದಲ್ಲಿ 2024ನೇ ಹೊಸ ವರ್ಷದ ದಿನದರ್ಶಿಕೆಯನ್ನು ಬಿಡುಗಡೆಗೊಳಿಸಿ ಶ್ರೀಗಳು ಮಾತನಾಡಿದರು.

ಗದಗ-ಬೆಟಗೇರಿ ನಗರಸಭಾಧ್ಯಕ್ಷೆ ಉಷಾ ಮಹೇಶ ದಾಸರ, ಬಿಜೆಪಿ ಯುವ ಮುಖಂಡರಾದ ಮಹೇಶ ದಾಸರ ಅವರ ನೂತನ ಗೃಹಪ್ರವೇಶದ ಸವಿನೆನಪಿಗಾಗಿ ಸೋಮೇಶ ಹಿರೇಮಠ ಸೇವಾ ಪ್ರತಿಷ್ಠಾನ ವತಿಯಿಂದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿಯವರ ಭಾವಚಿತ್ರವಿರುವ 2024ನೇ ಹೊಸ ವರ್ಷದ ದಿನದರ್ಶಿಕೆ ಹಾಗೂ ಪೂಜಾರ್ಹ ಸಸಿಗಳನ್ನು ವಿತರಣೆ ಮಾಡಿರುವ ಸೇವಾ ಪ್ರತಿಷ್ಠಾನದ ಕಾರ್ಯ ಮಾದರಿ ಎಂದು ತೋಂಟದ ಸಿದ್ಧರಾಮ ಶ್ರೀಗಳು ಹೇಳಿದರು.

ನೂತನ ಗೃಹಪ್ರವೇಶಕ್ಕೆ ಆಗಮಿಸಿದ್ದ ಪೂಜ್ಯರು ಹಾಗೂ ಗದಗ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಸೇರಿದಂತೆ ಸಾವಿರಾರು ಆತ್ಮೀಯರಿಗೆ ದಿನದರ್ಶಿಕೆಗಳನ್ನು, ಸಸಿಗಳನ್ನು ಉಷಾ ಮಹೇಶ್ ದಾಸರ, ಮಹೇಶ ದಾಸರ ಹಾಗೂ ಪ್ರತಿಷ್ಠಾನದ ಸದಸ್ಯರು ವಿತರಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ಚಂದ್ರು ತಡಸದ, ಮುತ್ತಣ್ಣ ಮುಸಿಗೇರಿ, ಕರ್ನಾಟಕ ರಕ್ಷಣಾ ವೇದಿಕೆಯ ವೆಂಕಟೇಶ ಬೇಲೂರು, ಸುನೀಲ ಕುಲಕರ್ಣಿ, ಧೀರಜ್ ನಂದಿಕೋಲಮಠ, ಬಸವರಾಜ ಈಟಿ ಹಾಗೂ ದಾಸರ ಕುಟುಂಬ, ಪರಿವಾರದವರು ಉಪಸ್ಥಿತರಿದ್ದರು. ಪ್ರತಿಷ್ಠಾನದ ಅಧ್ಯಕ್ಷ ಬಸವಣ್ಣೆಯ್ಯ ಹಿರೇಮಠ ಸ್ವಾಗತಿಸಿ, ವಂದಿಸಿದರು.

## ಯೋಗ ಸಮ್ಮಿತ್-2023 ಮಾಹಿತಿ ಕಾರ್ಯಕ್ರಮದಲ್ಲಿ ಎಸ್.ಎಸ್. ಹಿರೇಮಠ

# ಆರೋಗ್ಯವಂತರಾಗಿರಲು ಯೋಗ ಸಾಧನೆ ಅಗತ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ಓರ್ವ ವ್ಯಕ್ತಿ ದೈಹಿಕವಾಗಿ, ಮಾನಸಿಕವಾಗಿ, ಆಧ್ಯಾತ್ಮಿಕವಾಗಿ, ಸಾಮಾಜಿಕವಾಗಿ ಸ್ವಸ್ಥನಾಗಿದ್ದರೆ ಆ ವ್ಯಕ್ತಿಯನ್ನು ಆರೋಗ್ಯವಂತನೆಂದು ಕರೆಯುವರು.

ಪ್ರಸ್ತುತ ದಿನಮಾನದಲ್ಲಿ ನಾವೆಲ್ಲರೂ ಆರೋಗ್ಯ ವಂತರಾಗಿರದೆ ಒಂದಿ ಲ್ಲೊಂದು ರೀತಿಯಲ್ಲಿ ಅನಾರೋಗ್ಯ ವಂತರಾಗಿದ್ದೇವೆ. ಯೋಗವು ಪರಿಪೂರ್ಣ ಆರೋಗ್ಯ ನೀಡುತ್ತದೆ. ಯೋಗದ ಪ್ರಕ್ರಿಯೆಗಳಾದ ಆಸನ, ಪ್ರಾಣಾಯಾಮ, ಧ್ಯಾನ ಮತ್ತು ಆಧ್ಯಾತ್ಮ ಸಾಧನೆಗಳಿಂದ ನಾವು ದೈಹಿಕ, ಮಾನಸಿಕ, ಸಾಮಾಜಿಕ, ನೈತಿಕವಾಗಿ ಆರೋಗ್ಯಂತರಾಗಿರಲು ಸಾಧ್ಯ. ಈ ಹಿನ್ನೆಲೆಯಲ್ಲಿ ಪರಿಪೂರ್ಣ ಆರೋಗ್ಯವಂತರಾಗಿರಲು ಯೋಗ ಸಾಧನೆ ಅಗತ್ಯವಾಗಿದೆ ಎಂದು ವಿಶ್ವ ಯೋಗ ಸಮ್ಮೇಳನದ ಪ್ರಚಾರ ಸಮಿತಿಯ ಜಿಲ್ಲಾ (12 ಜಿಲ್ಲೆ) ವಲಯ ಮುಖ್ಯಸ್ಥರು ಮತ್ತು ಶಿವಾನಂದ ಯೋಗ ಕಾಲೇಜು ಪ್ರಾಚಾರ್ಯ ಎಸ್. ಎಸ್. ಹಿರೇಮಠ ತಿಳಿಸಿದರು.



ರೋಟರಿ ಗ್ಲೋಬಲ್ ಯೋಗ ಟ್ರಸ್ಟ್ ಬೆಂಗಳೂರು ಇವರ ಪ್ರಾಯೋಜಕತ್ವ ಮತ್ತು ಡಾ. ಯೋಗಿ ದೇವರಾಜ ಗುರೂಜಿ ಇವರ ಸಾರಥ್ಯದಲ್ಲಿ ಡಿ. 23 ಮತ್ತು 24ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುವ ಗ್ಲೋಬಲ್ ಯೋಗ ಸಮ್ಮಿತ್-2023 ಕಾರ್ಯಕ್ರಮದ ಮಾಹಿತಿ ನೀಡಲು ಎಸ್.ವಾಯ್.ಬಿ.ಎಂ. ಎಸ್. ಯೋಗಪಾಠಶಾಲೆಯ ಬಸವ ಯೋಗ ಮಂದಿರಕ್ಕೆ ಆಗಮಿಸಿದ ಸಂದರ್ಭದಲ್ಲಿ ಅವರು ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಬಸವ ಯೋಗ ಮಹಾವಿದ್ಯಾಲಯದ ಪ್ರಾಚಾರ್ಯ ಕೆ.ಎಸ್. ಪಲ್ಲೇದ ಮಾತನಾಡಿ, ಲಿಂಗ, ವರ್ಣ, ವಯೋಬೇಧವಿಲ್ಲದೇ ಎಲ್ಲರೂ ಆರೋಗ್ಯವಂತರಾಗಿರಲು ಸುಲಭ ಮತ್ತು ಸರಳವಾಗಿರುವ ಯೋಗ ಸರ್ವೋತ್ಕೃಷ್ಟ ಸಾಧನ ಮಾರ್ಗವಾಗಿದೆ. ಈ ಯೋಗ ಮಾರ್ಗ ಅನುಸರಿಸಿ ಸದಾ ಆರೋಗ್ಯವಂತರಾಗಿ ರಾಷ್ಟ್ರದ ಪ್ರಗತಿಗೆ ನಾವೆಲ್ಲ ಶ್ರಮಿಸೋಣ ಎಂದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಗ್ಲೋಬಲ್ ಯೋಗ ಸಮ್ಮಿತ್ ಜಿಲ್ಲಾ ಸಂಯೋಜಕ ಸುನೀಲ ಹಿರೇಮಠ, ಸಹ ಸಂಯೋಜಕ ವೆಂಕಟೇಶ ಜಿತೂರಿ, ಮಹಿಳಾ ಸಂಯೋಜಕಿ ಸುಮಂಗಲಾ ಹದ್ಲಿ, ಸಹ ಸಂಯೋಜಕಿ ಆರತಿ ಜೈನ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದ ಯೋಗ ಶಿಕ್ಷಕಿ ಸುನಂದಾ ಜ್ಯಾನೋಪಂತರ ಯೋಗ ಗೀತೆ ಹೇಳಿದರು.

ಸಭೆಯಲ್ಲಿ ಶರಣಬಸವ, ತನುಜಾ ಕಾಜಳ್ಳಿ, ವಿಜಯಾ ಚನ್ನಶೆಟ್ಟಿ, ಮಹಾದೇವಿ ಚರಂತಿಮಠ, ವಿಜಯಲಕ್ಷ್ಮೀ ಆನೆಹೊಸೂರ, ಗಿರಿಜಾ ನಾಲತ್ವಾಡಮಠ, ಇನಾಮತಿ, ಅಸೂಟಿ, ಅರಹುಣಸಿ ಮುಂತಾದವರು ಉಪಸ್ಥಿತರಿದ್ದರು.


ಬಸವ ಯೋಗ ಕೇಂದ್ರದ ಅಡಳಿತ ಮಂಡಳಿ ಸದಸ್ಯ ಡಾ. ಎಂ.ವಿ. ಐಹೊಳ್ಳಿ ಸ್ವಾಗತಿಸಿದರು. ಶರಣಬಸವ ಕಾರ್ಯಕ್ರಮ ನಿರೂಪಿಸಿದರು.

## ಇನ್ಫ್ಲೂಯೆಂಜಾ ತರಹದ ಕಾಯಿಲೆ, ಉಸಿರಾಟದ ಕಾಯಿಲೆಗಳ ಕುರಿತು ಸಾರ್ವಜನಿಕರಿಗೆ ಸಲಹೆ

# ಕಾಯಿಲೆಯ ಬಗ್ಗೆ ಮುನ್ನೆಚ್ಚರಿಕೆಯಿರಲಿ

■ವಿಜಯಸಾಕ್ಷಿ ಸುದ್ದಿ, ಗದಗ

ಇತ್ತೀಚಿನ ಮಾಧ್ಯಮಗಳ ವರದಿಯಂತೆ ಹಾಗೂ WHO ಹೇಳಿಕೆಯನ್ನು ಗಮನಿಸಿದಾಗ ಚೀನಾದಲ್ಲಿನ ಮಕ್ಕಳಲ್ಲಿ ಉಸಿರಾಟದ ಕಾಯಿಲೆಯ ಹೆಚ್ಚಳವು ಇನ್ಫ್ಲೂಯೆಂಜಾ, ಮೈಕೋಪ್ಲಾಸ್ಮಾ ನ್ಯುಮೋನಿಯಾ, SARS-CoV2 ನಂತಹ ಸಾಮಾನ್ಯ ಸೂಕ್ಷ್ಮಾಣು ಜೀವಿಗಳು ಕಾರಣವೇ ಹೊರತು, ಇತರ ಯಾವುದೇ ಅಸಾಮಾನ್ಯ ರೋಗಕಾರಕದಿಂದಲ್ಲ ಎಂಬುದು ಖಚಿತವಾಗಿದೆ.



ಸೀಸನಲ್ ಫ್ಲೂ ಸಾಂಕ್ರಾಮಿಕ ರೋಗವಾಗಿದ್ದು, ಜ್ವರ ಬಂದಿರುವ ವ್ಯಕ್ತಿಯು ಕೆಮ್ಮಿದಾಗ, ಸೀನಿದಾಗ ಅಥವಾ ಹನಿಗಳ ಸಂಪರ್ಕದ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ ಹರಡುತ್ತದೆ. ಈ ಸ್ವಯಂ ಸೀಮಿತ ರೋಗವು 5-7 ದಿನಗಳವರೆಗೆ ಇರುತ್ತದೆ. ಆದಾಗ್ಯೂ ಇದು ಮಕ್ಕಳಿಗೆ, ವೃದ್ಧರಿಗೆ, ಗರ್ಭಿಣಿಯರಿಗೆ, ರೋಗ-ನಿರೋಧಕ ಶಕ್ತಿ ಕ್ಷೀಣಿಸಿದವರಿಗೆ ಮತ್ತು ದೀರ್ಘಕಾಲೀನ ಔಷಧಿಗಳನ್ನು ತೆಗೆದುಕೊಳ್ಳುವವರು ವಿಶೇಷ ವಾಗಿ ಸ್ಟಿರಾಯ್ಡ್‌ಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚಿನ ಅಪಾಯವನ್ನುಂಟು ಮಾಡುತ್ತದೆ.

ಜ್ವರ, ಶೀತ ಅಸ್ವಸ್ಥತೆ, ಹಸಿವಿನ ಕೊರತೆ, ಮೈ-ಕೈನೋವು, ವಾಕರಿಕೆ, ಸೀನುವಿಕೆ ಮತ್ತು ಒಣ ಕೆಮ್ಮು ಹಲವಾರು ದಿನಗಳವರೆಗೆ ಇರುತ್ತದೆ ಮತ್ತು ಹಠಾತ್ ಅಸ್ವಸ್ಥತೆ ಈ ರೋಗದ ಸಾಮಾನ್ಯ ಲಕ್ಷಣಗಳಾಗಿದ್ದು, ಇದು ಹೆಚ್ಚೆಂದರೆ 3 ವಾರಗಳವರೆಗೆ ಇರುತ್ತದೆ. ಈ ನಿಟ್ಟಿನಲ್ಲಿ ಇನ್ಫ್ಲೂಯೆಂಜಾ ಮತ್ತ ಇತರೆ ಉಸಿರಾಟದ ಕಾಯಿಲೆಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ಸಾರ್ವಜನಿಕರು ಪಾಲಿಸಬೇಕಾದ ಕ್ರಮಗಳು ಹೀಗಿವೆ.

**ಮಾಡಬೇಕಾದವುಗಳು:** ಕೆಮ್ಮುವಾಗ ಅಥವಾ ಸೀನುವಾಗ ಬಾಯಿ ಮತ್ತು ಮೂಗನ್ನು ಕರವಸ್ತ್ರ ಅಥವಾ ಟಿಶ್ಯೂ ಪೇಪರ್‌ನಿಂದ ಮುಚ್ಚಿಕೊಳ್ಳುವುದು, ಸಾಬೂನು ಮತ್ತು ನೀರಿನಿಂದ ಕೈಗಳನ್ನು ಆಗಾಗ್ಗೆ ತೊಳೆಯುವುದು, ಜನಸಂದಣಿ ಇರುವ ಸ್ಥಳಗಳಿಗೆ ಭೇಟಿ ನೀಡಬೇಕಾದಲ್ಲಿ ಫೇಸ್ ಮಾಸ್ಕ್ ಬಳಸುವುದು, ಫ್ಲೂ ಪೀಡಿತ ವ್ಯಕ್ತಿಗಳಿಂದ ಕನಿಷ್ಠ ಅಂತರವನ್ನು ಕಾಪಾಡಿಕೊಳ್ಳುವುದು, ಸಮರ್ಪಕವಾಗಿ ನಿದ್ರೆ ಮಾಡಿ ದೈಹಿಕವಾಗಿ ಕ್ರಿಯಾಶೀಲರಾಗಿರುವುದು ಮತ್ತು ಒತ್ತಡವನ್ನು ಪರಿಣಾಮಕಾರಿಯಾಗಿ ನಿಭಾಯಿಸುವುದು, ಸಾಕಷ್ಟು ನೀರು ಕುಡಿಯುವುದು ಮತ್ತು ಪೌಷ್ಠಿಕ ಆಹಾರವನ್ನು ಸೇವಿಸುವುದು.

ಮಾಡಬಾರದ್ದು: ಅನಗತ್ಯವಾಗಿ ಕಣ್ಣು, ಮೂಗು ಮತ್ತು ಬಾಯಿಯನ್ನು ಮುಟ್ಟಬೇಡಿ, ಅನಗತ್ಯವಾಗಿ ಜನಸಂದಣಿ ಇರುವ ಸ್ಥಳಗಳಿಗೆ ಭೇಟಿ ನೀಡಬೇಡಿ. ಸಾರ್ವಜನಿಕ ಪ್ರದೇಶಗಳಲ್ಲಿ ಉಗುಳಬೇಡಿ. ಇನ್ಫ್ಲೂಯೆಂಜಾ ಹಾಗೂ ಇತರ ಉಸಿರಾಟದ ಕಾಯಿಲೆಗಳ ಹೆಚ್ಚಿನ ಸಂಭವವಿರುವ ಸ್ಥಳಗಳಿಗೆ ಪ್ರಯಾಣ ಮಾಡಬೇಡಿ.

ಇನ್ಫ್ಲೂಯೆಂಜಾ/ಫ್ಲೂ ಲಕ್ಷಣಗಳಿದ್ದಲ್ಲಿ ಹತ್ತಿರದ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ. ಮನೆಯಲ್ಲಿಯೇ ಇರಿ. ರಕ್ಷಣೆಗಾಗಿ ಫೇಸ್ ಮಾಸ್ಕ್ ಬಳಸಿ. ರೋಗ ಲಕ್ಷಣಗಳು ಪ್ರಾರಂಭವಾದ ನಂತರ ಕನಿಷ್ಠ 7 ದಿನಗಳವರೆಗೆ ಅಥವಾ 24 ಗಂಟೆಗಳವರೆಗೆ ರೋಗ ಲಕ್ಷಣಗಳಿಲ್ಲದಿರುವವರೆಗೆ ಇತರರೊಂದಿಗೆ ನಿಕಟ ಸಂಪರ್ಕವನ್ನು ತಪ್ಪಿಸಿ.

ವೈದ್ಯರನ್ನು ಸಂಪರ್ಕಿಸದೇ ಸ್ವಯಂ ಔಷಧಿ ತೆಗೆದುಕೊಳ್ಳಬಾರದು ಮತ್ತು ವೈದ್ಯಕೀಯ ಸಲಹೆಗಳನ್ನು ಸರಿಯಾಗಿ ಅನುಸರಿಸಬೇಕು ಎಂದು ಜಿಲ್ಲಾ ಸಮೀಕ್ಷಾ ಘಟಕದ ಜಿಲ್ಲಾ ಸಮೀಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಕರಾಟೆ ಪಟುಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅಣ್ಣಿಗೇರಿಯ ಗೋಲ್ಡನ್ ಕರಾಟೆ ಕ್ಲಬ್‌ನ ಭರತ ಹೂಗಾರ, ಶಂಕರಪ್ಪ ಬಡಕಣ್ಣವರ, ಅಜಯ ಹಣಸಿ, ಹೆಚ್ಚುವರಿ ಆಟಗಾರರಾಗಿ ಶ್ರೀಮಂಧರ ಹನುಮಕ್ಕನವರ, ಹರ್ಷಿತಾ ಬಾಕಳೆ ಇವರು ರಾಷ್ಟ್ರಮಟ್ಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲು ಅರ್ಹತೆ ಪಡೆದಿದ್ದಾರೆ.

# ಪುರಸಭೆ ಸದಸ್ಯನ ವಿರುದ್ಧ ಕ್ರಮ ಕೈಗೊಳ್ಳಲು ಮನವಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಾಸಕ ಡಾ.ಚಂದ್ರು ಲಮಾಣಿ ಅವರಿಗೆ ಮಾನಸಿಕ ಕಿರುಕುಳ ನೀಡುತ್ತಿರುವ ಪುರಸಭೆ ಸದಸ್ಯ ಮಹೇಶ ಹೊಗೆಸೊಪ್ಪಿನ ಸೇರಿ 5 ಜನರ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ ಶುಕ್ರವಾರ ನೊಂದ ಸಾರ್ವಜನಿಕರು ತಹಸೀಲ್ದಾರ ಹಾಗೂ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿದರು.

ಮನವಿ ಪತ್ರದಲ್ಲಿ, ಮಹೇಶ ಹೊಗೆಸೊಪ್ಪಿನ ಸೇರಿ ಶಿವಣ್ಣ ಲಿಂಗಶೆಟ್ಟಿ, ಚನ್ನಪ್ಪ ಷಣ್ಮುಖಿ, ಆನಂದ ಅಮರಶೆಟ್ಟಿ, ನಾಗಪ್ಪ ಚಿಂಚಲಿ ಅವರು ಶಾಸಕರಿಗೆ ಮಾನಸಿಕ ಹಿಂಸೆ ನೀಡುತ್ತಿದ್ದಾರೆ. ಒಂದಿಲ್ಲೊಂದು ನೆಪದಲ್ಲಿ ಶಾಸಕರ ವಿರುದ್ಧ ಪ್ರತಿಭಟನೆ ಮಾಡುವುದು, ಪತ್ರಿಕೆಗಳಿಗೆ ಸುಳ್ಳು ಹೇಳಿಕೆ ನೀಡುವುದು, ಅಗೌರವ ತೋರಿಸುವುದು, ಶಾಸಕರು ಕಾಣೆಯಾಗಿದ್ದಾರೆಂದು ದೂರು ನೀಡುವುದು ಹೀಗೆ ಹಲವು ವಿಧದಲ್ಲಿ ದಲಿತ ಶಾಸಕರ ಮೇಲೆ ನಿರಂತರ ಕಿರುಕುಳ ನೀಡುತ್ತಿದ್ದಾರೆ. ಇವರನ್ನು ಗಡಿಪಾರು ಮಾಡಬೇಕು, ಗೂಂಡಾ ಕಾಯ್ದೆಯಡಿ ಬಂಧಿಸಿ ಸಾರ್ವಜನಿಕರ ನೆಮ್ಮದಿಯ ಜೀವನಕ್ಕೆ ಅನುವು ಮಾಡಿಕೊಡಬೇಕು. ಇಲ್ಲದಿದ್ದರೆ ಧರಣಿ ಹಮ್ಮಿಕೊಳ್ಳುತ್ತೇವೆ ಎಂದು ಎಚ್ಚರಿಸಿದರು.

ಜಾನು ಲಮಾಣಿ, ರಾಮಣ್ಣ ಲಮಾಣಿ(ಶಿಗ್ಲಿ), ಅಶೋಕ ಲಮಾಣಿ ಮಾತನಾಡಿದರು. ಶಿವಣ್ಣ ಲಮಾಣಿ, ಪುಂಡಲೀಕ, ಟೋಪಣ್ಣ, ಗುರಪ್ಪ, ಸೋಮರೆಡ್ಡಿ, ಸಕ್ರಪ್ಪ, ಕಾಶಪ್ಪ, ಮಲ್ಲೇಶ, ರಮೇಶ, ಈರಣ್ಣ, ಪರಮೇಶ, ಧರ್ಮಪ್ಪ, ತಾವರಪ್ಪ, ಲಾಲಪ್ಪ, ಮಹೇಶ, ತಿಪ್ಪಣ್ಣ, ರುದ್ರಪ್ಪ, ಗಣೇಶ, ತುಕ್ಕಪ್ಪ, ಕಿರಣ, ಉಮೇಶ, ಶಾಂತಪ್ಪ, ಕೃಷ್ಣ, ನಿಂಗಪ್ಪ, ಸುರೇಶ, ರವಿ, ಪುಟ್ಟಪ್ಪ, ಶೇಖಪ್ಪ ಸೇರಿದಂತೆ ಹಲವರಿದ್ದರು. ತಹಸೀಲ್ದಾರ ವಾಸುದೇವ ಸ್ವಾಮಿ ಮನವಿ ಸ್ವೀಕರಿಸಿದರು. ಸಿಪಿಐ ನಾಗರಾಜ ಲಕ್ಕುಂಡಿ ಇದ್ದರು.

# ಆತಂಕ ಬೇಡ ಸಿದ್ದು ಅಭಯ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು,

ಶಾಲೆಗಳಿಗೆ ಬಾಂಬ್ ಬೆದರಿಕೆ ಕರೆ ಮಾಡಿರುವವರನ್ನು ಪತ್ತೆಹಚ್ಚುವಂತೆ ಪೊಲೀಸರಿಗೆ ಸೂಚನೆ ನೀಡಿದ್ದೇನೆ. ಪೋಷಕರು ಯಾವುದೇ ಆತಂಕಪಡುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ವಿಧಾನಸೌಧದಲ್ಲಿಂದು ಆರೋಗ್ಯ ಇಲಾಖೆಯ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಲೆಗಳ ಬಾಂಬ್ ಬೆದರಿಕೆ ಕರೆ ಬಗ್ಗೆ ಪೊಲೀಸರಿಂದ ಪ್ರಾಥಮಿಕ ವರದಿಯನ್ನು ಪಡೆದಿದ್ದೇನೆ. ಎಲ್ಲ ಅಗತ್ಯ ಎಚ್ಚರಿಕೆ ವಹಿಸುವಂತೆ ಸೂಚನೆಯನ್ನು ಕೊಟ್ಟಿದ್ದೇನೆ ಎಂದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka